ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜುಲೈ 2019 ಮಾಸ ಪತ್ರಿಕೆ

ಸಂಪುಟ/Volume : 41
ಸಂಚಿಕೆ/Issue : 10
ಪುಟ/Pages : 12
ಬೆಲೆ/Price : ₹ 10/-

Akhila Karnataka Shikshaka Samachar | July 2019 | Monthly




A Journal of Karnataka State Secondary Teachers' Association

# ವೀರ ವನಿತೆ ಭೀಕಾಜಿಕಾಮಾ

ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮಹಾನ್ ಹೋರಾಟಗಾರ ಪುರುಷರ ಹೆಸರು ಹೇಗೆ ಅಜರಾಮರವಾಗಿದೆಯೋ ಹಾಗೆಯೇ ಮಹಿಳೆಯರ ಹೆಸರುಗಳು ಅಮರವಾಗಿದೆ. ಆ ನಾರಿಮಣಿಗಳಲ್ಲಿ ಅತ್ಯಂತ ಪ್ರಮುಖ ಹೆಸರೆಂದರೆ ಭೀಕಾಜಿಕಾಮಾರವರದು. ಭೀಕಾಜಿರವರು ಮುಂಬಯಿಯಲ್ಲಿ ಸೆಪ್ಟೆಂಬರ್ 24, 1861 ರಲ್ಲಿ ಪಾರ್ಸಿ ಕುಟುಂಬದಲ್ಲಿ ಸೋರಬಜಿ ಪಟೇಲ್‌ರವರ ಮಗಳಾಗಿ ಜನ್ಮ ತಾಳಿದರು. ಇಂಗ್ಲೀಷ್ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಭೀಕಾಜಿಯವರು ಅನೇಕ ಸ್ವಾತಂತ್ರ್ಯ ಹೋರಾಟಗಾರರಿಂದ ಪ್ರಭಾವಿತರಾಗಿದ್ದರು. ಇಂಗ್ಲೀಷ್ ಮಾಧ್ಯಮದ ಎಲೆಕ್ಸಾಂಡ್ರಿಯಾ ಗರ್ಲ್ಸ್ ಶಾಲೆಯಲ್ಲಿ ಓದಿಸುವುದರೊಂದಿಗೆ ಭೀಕಾಜಿಯವರಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಬಿತ್ತಲು ತಂದೆಯವಾದ ಸೋರಬ್ಜಿಯವರು ಪ್ರಯತ್ನ ಪಟ್ಟರು. ಆದರೆ ಭೀಕಾಜಿ ಭಾರತಮಾತೆಯ ಸುಪುತ್ರಿ ಇದಕ್ಕೆಲ್ಲಾ ಜಗ್ಗುವವರು ಅವರಾಗಿರಲಿಲ್ಲ. ಭಾರತಮಾತೆಯ ಅಸಹ್ಯ, ಅಪಮಾನಕರ ಜೀವನವನ್ನು ಅವರಿಂದ ಸಹಿಸಲು ಆಗಲಿಲ್ಲ. ತಮ್ಮ 24ನೇ ವಯಸ್ಸಿನಲ್ಲಿಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಮೊದ–ಮೊದಲು ಮಹಿಳೆಯರನ್ನು ಒಗ್ಗೂಡಿಸುವ ಕೆಲಸವನ್ನು ಪ್ರಾರಂಭ ಮಾಡಿದರು. ಅವರು ಮದುವೆಗೂ ಮುಂಚೆಯೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅತ್ಯಂತ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಇದನ್ನು ಗಮನಿಸಿದ ಸೋರಬ್ಜಿ ಪಟೇಲ್‌ರವರು ಮಗಳಿಗೆ ವಿವಾಹ ಮಾಡಿದರೆ ಅವಳ ಕೌಟುಂಬಿಕ ಜೀವನ ಪ್ರಾರಂಭವಾಗಿ ತನ್ನ ವೈಯಕ್ತಿಕ ಜೀವನದ ಬಗ್ಗೆ ಗಮನಕೊಡಬಹುದು ಎಂದು ಭಾವಿಸಿ ರುಸ್ತುಮ್‌ಜಿ ಕಾಮರವರೊಂದಿಗೆ ದಿನಾಂಕ 3 ಆಗಸ್ಟ್ 1885 ರಂದು ವಿವಾಹ ಮಾಡಿದರು. ಮೊದ ಮೊದಲು ರುಸ್ತುಂಜೀಕಾಮಾರವರು ಭೀಕಾಜಿಕಾಮಾರವರ ಸ್ವಾತಂತ್ರ್ಯ ಹೋರಾಟದ ಭಾಗವಹಿಸುವಿಕೆಯನ್ನು ಹೊಗಳಿದರು, ಹಾಗೆಯೇ ಪ್ರೋತ್ಸಾಹಿಸಿದರು. ಇಷ್ಟು ಪ್ರೋತ್ಸಾಹ ಪಡೆದ ಭೀಕಾಜಿಕಾಮಾರವರು ಪೂರ್ಣಕಾಲಿಕವಾಗಿ ಹೋರಾಟದಲ್ಲಿ ಭಾಗವಹಿಸಲು ಪ್ರಾರಂಭಿಸಿದರು. ಮೊದಮೊದಲು ಎಲ್ಲವೂ ಚೆನ್ನಾಗಿಯೇ ಎಂದೆನಿಸಿದರು ಬರು–ಬರುತ್ತಾ ಭೀಕಾಜಿಕಾಮಾರವರ ಆರೋಗ್ಯದ ಮೇಲಾಗುತ್ತಿರುವ ಪರಿಣಾಮ ಹಾಗೂ ವೈಯಕ್ತಿಕ ಜೀವನದಲ್ಲಿ ಆಗುತ್ತಿರುವ ಏರುಪೇರುಗಳಿಂದ ರುಸ್ತುಂಜೀಕಾಮಾರವರು ಬೇಸರಗೊಂಡರು. ಇಷ್ಟೊತ್ತಿಗಾಗಲೇ ಭೀಕಾಜಿಕಾಮಾರವರು ಅನೇಕ ಬಾರಿ ಸೆರೆಮನೆವಾಸ ಅನುಭವಿಸಿ ಆಗಿತ್ತು. ಇದರಿಂದ ಬೇಸತ್ತ ರುಸ್ತುಂಜೀಕಾಮಾರವರು ಭೀಕಾಜಿಕಾಮಾರವರ ಆರೋಗ್ಯದ ತಪಾಸಣೆಗಾಗಿ ಹಾಗೂ ಚಿಕಿತ್ಸೆಯ ನೆಪ ಒಡ್ಡಿ ಬ್ರಿಟನ್‌ಗೆ 1902ರಲ್ಲಿ ಕಳಿಸಿದರು.

22 ಆಗಸ್ಟ್ 1907 ರಂದು ಭೀಕಾಜಿಕಾಮಾರವರು ಜರ್ಮನಿಯಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದರು. ಹಾಗೂ ಅಲ್ಲಿ ವೀರೋಚಿತವಾದ ಭಾಷಣವನ್ನು ಮಾಡುತ್ತಾ ಎಲ್ಲಾ ದೇಶದವರು ಭಾರತ ಮಾತೆಯನ್ನು ಸ್ವತಂತ್ರ ಮಾಡುವಲ್ಲಿ ಪಾಲ್ಗೊಳ್ಳಬೇಕೇಂದು ಕೇಳಿಕೊಳ್ಳುತ್ತಾ ತಾವು ಧರಿಸಿದ ಸೀರೆಯ ಸೆರಗಿನ ಭಾಗವನ್ನು ಹರಿದು ಧ್ವಜದ ರೀತಿಯಲ್ಲಿ ಹಾರಾಡಿಸುತ್ತಾ ಇದು ನನ್ನ ಭಾರತದ ಸ್ವತಂತ್ರದ ಪ್ರತೀಕವೆಂದು ತಿಳಿಸುತ್ತಾ "Behold, the flag of independent India is born! It has been made sacred by the blood of young Indians who sacrificed their lives in its honour. In the name of this flag, I appeal to lovers of freedom all over the world to support this struggle." ಇದರಿಂದ ಅನೇಕರು ಪ್ರಭಾವಿತರಾಗುತ್ತಾರೆ. ಎಲ್ಲರೂ ಭಾರತೀಯ ಮೊದಲ ಧ್ವಜಕ್ಕೆ ಗೌರವವನ್ನು ತೋರಿಸಬೇಕೆಂದು ಕೇಳುತ್ತಾ "This is the flag of independent India. I appeal to all gentlemen to stand and salute the Flag" ಎನ್ನುತ್ತಾರೆ.

ಇಂಡಿಯಾ ಆಫೀಸ್‌ನ ಅಧಿಕಾರಿಗಳು ಭೀಕಾಜಿಯವರ ವೀರೋಚಿತ ಭಾಷಣಗಳಿಂದ ಕೆಂಡಾಮಂಡಲವಾಗುತ್ತಾರೆ ಮತ್ತು ಕಾಮಾರವರಿಗೆ ಭಾರತಕ್ಕೆ ಹಿಂದಿರುಗುವಂತೆ ತಿಳಿಹೇಳುತ್ತಾರೆ. ಆದರೆ ಭೀಕಾಜಿಕಾಮಾ ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವವರಾಗಿರಲಿಲ್ಲ. ಅವರು ವಿದೇಶದಲ್ಲಿಯೇ ರಾಷ್ಟ್ರೀಯ ಆಂದೋಲನವನ್ನು ತೀವ್ರಗೊಳಿಸುತ್ತಾರೆ. ನಂತರ ಭೀಕಾಜಿಯವರಿಗೆ ಬ್ರಿಟಿಷರು ಅವರ ವಿರುದ್ಧ ಕಠೋರವಾಗಿ ನಡೆದುಕೊಳ್ಳುತ್ತಾರೆಂದು ತಿಳಿದಾಗ ಗುಪ್ತವಾಗಿ ಇಂಗ್ಲೀಷ್ ಚ್ಯಾನಲ್ ಮೂಲಕ ಫ್ರಾನ್ಸ್‌ಗೆ ಹೋಗುತ್ತಾರೆ. ಫ್ರಾನ್ಸ್‌ನಲ್ಲಿ ತಮ್ಮ ಕಾರ್ಯಚಟುವಟಿಕೆಗಳನ್ನು ತೀವ್ರಗೊಳಿಸಿದರು. ಬ್ರಿಟಿಷ್ ಅಧಿಕಾರಿಗಳು ವಿದೇಶದಲ್ಲಿಯೂ ಭೀಕಾಜಿಯವರ ತೀವ್ರ ಚಟುವಟಿಕೆಗಳಿಂದ ಆತಂಕಿತರಾಗಿ ಭಾರತಕ್ಕೆ ಅವರು ಬರುವುದನ್ನು ನಿಷೇಧಿಸಿದರು. ಬ್ರಿಟಿಷ್ ಅಧಿಕಾರಿಗಳು ಫ್ರಾನ್ಸ್‌ಗೆ ಭೀಕಾಜಿಯವರನ್ನು ಬ್ರಿಟಿಷ್ ಅಧಿಕಾರಿಗಳಿಗೆ ಒಪ್ಪಿಸಲು ಕೇಳುತ್ತಾರೆ ಆದರೆ ಫ್ರಾನ್ಸ್ ಸರಕಾರ ಒಪ್ಪುವುದಿಲ್ಲ. ಫ್ರಾನ್ಸ್ ದೇಶದಲ್ಲಿ ಸುರಕ್ಷತೆಯನ್ನು ಕಂಡ ಭೀಕಾಜಿಕಾಮಾ ವಂದೇಮಾತರಂ ಪತ್ರಿಕೆಯನ್ನು ಪ್ರಕಾಶಿಸುತ್ತಾರೆ. ತಮ್ಮ 35ನೇ ವಯಸ್ಸಿನಲ್ಲಿ ಆರೋಗ್ಯ ಕ್ಷೀಣವಾದುದರಿಂದ ಅವರು ನವೆಂಬರ್, 1935 ರಲ್ಲಿ ಮುಂಬಯಿಗೆ ಹಿಂದಿರುಗುತ್ತಾರೆ. 13 ಆಗಸ್ಟ್ 1936 ರಲ್ಲಿ ಅವರು ಮರಣ ಹೊಂದಿದರು. ಅವರ ಕೊನೆಯ ಶಬ್ದಗಳು "ವಂದೆ ಮಾತರಂ" ಆಗಿತ್ತು.

ಸಂಪಾದಕ



ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ
ಸದಸಿ ವಾಕ್ಪಟುತಾಯುಽಧಿವಿಕ್ರಮಃ ।
ಯಶಸಿ ಚಾಭಿರುಚಿಃ ವ್ಯಸನಂ ಶ್ರುತಾ
ಪ್ರಕೃತಿಸಿದ್ಧಮಿದಂ ಹಿ ಮಹಾತ್ಮನಾಮ್ ॥

ಕಷ್ಟದ ಪರಿಸ್ಥಿತಿಯಲ್ಲಿ ಧೈರ್ಯವು ಜಾಗೃತವಾಗುತ್ತದೆ. ಉನ್ನತಿ ಹೊಂದುತ್ತಿರುವಾಗ ಕ್ಷಮಾಗುಣವು ಬೆಂಬಲ ಕೊಡುತ್ತದೆ. ಸಭೆಯಲ್ಲಿ ಮಂಡಿತರಾದಾಗ ವಾಕ್ಪ್ರವಾಹವು ಹರಿಯುತ್ತದೆ. ಯಶಸ್ಸಿನ ಉತ್ತುಂಗದಲ್ಲಿರುವಾಗ ಸತ್ಕಾರ್ಯಗಳಲ್ಲಿ ಪ್ರವೃತ್ತಿಯು ಇಮ್ಮಡಿಯಾಗುತ್ತದೆ. ಜ್ಞಾನವು ಸಂಪಾದನೆಯಾದಷ್ಟೂ ಪಠಣ-ಚಿಂತನಾದಿಗಳಲ್ಲಿ ಆಸಕ್ತಿಯು ಅಧಿಕವಾಗುತ್ತದೆ. ಇಂಥ ಉತ್ತಮ ಗುಣಗಳು ಮಹಾತ್ಮರಿಗೆ ಸ್ವಭಾವ ಸಿದ್ಧವಾಗಿರುತ್ತವೆ.

- ನೀತಿಶತಕ

## ಪರಿವಿಡಿ


- ನಾಗಪಂಚಮಿ 3
- ಎಸ್. ನಾಗರಾಜ್ – ಕೆಲವು ನೆನಪುಗಳು 4
- ಮೇಧಾದೇವಿ – ಶ್ರೀ ವರಲಕ್ಷ್ಮೀ 5
- ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೇಡಿಕೆ 6
- ಬಳೆಗಳ ಸದ್ದಿನ ನಡುವೆ, ಕ್ರಾಂತಿಯ ಕಹಳೆ 7
- ಸೋದರತೆಯ ಬಾಂಧವ್ಯ ಬೆಸೆಯುವ ರಕ್ಷಾಬಂಧನ 8
- ರಾಷ್ಟ್ರೀಯ ಶಿಕ್ಷಣ ನೀತಿಯ ಕಾರ್ಯಕ್ರಮ ವರದಿ ಮಾಧ್ಯಮಗಳಲ್ಲಿ 10
- ಬೇಡಿಕೆ ಈಡೇರಿಕೆ – ವಿವಿಧೆಡೆಗಳಲ್ಲಿ 11
- ರಾಷ್ಟ್ರೀಯ ಶಿಕ್ಷಣ ನೀತಿ : ಚಿಂತನ–ಮಂಥನ 12
- ಗುರುವಂದನಾ 12

# ನಾಗಪಂಚಮಿ



**ಶ್ರೀಮತಿ ಮಯೂರಲಕ್ಷ್ಮೀ**
**ಉಪನ್ಯಾಸಕರು ಮತ್ತು ಬರಹಗಾರರು**
**ಎಂ.ಎ, ಎಂ.ಫಿಲ್ (ಇಂಗ್ಲಿಷ್)**

ಭಾರತೀಯ ಸಂಸ್ಕೃತಿಯಲ್ಲಿ ಹಬ್ಬಗಳು ಮನುಷ್ಯನ ಆವಿಷ್ಕಾರದೊಂದಿಗೆ ಬದಲಾಗುವ ಋತುಋತುಗಳೊಡನೆ ನಮ್ಮ ಸರ್ವತೋಮುಖ ಅಭಿವೃದ್ಧಿಯ ಸಾಧಕವೆನಿಸಿವೆ.

ಮಾನವನನ್ನು ಪರಿಪೂರ್ಣತೆಯತ್ತ ಕೊಂಡೊಯ್ಯಲು ನಮ್ಮ ದೇಶದ ಹಬ್ಬಗಳು ನಮ್ಮ ಬದುಕಿನ ಮೌಲ್ಯಗಳಿಗೆ ಪೂರಕ.

ಭಾರತದ ಹಲವಾರು ಪ್ರದೇಶಗಳಲ್ಲಿ ಶ್ರಾವಣ ಮಾಸದ ಶುಕ್ಲಪಕ್ಷದ ಪಂಚಮಿಯನ್ನು ನಾಗ ಪಂಚಮಿ ಎನ್ನುವ ವಿಶೇಷ ಹಬ್ಬದ ದಿನವನ್ನಾಗಿ ಆಚರಿಸುವ ಪದ್ಧತಿಯಿದೆ.

ನಾಗ ದೇವತೆಯ ಪೂಜೆಯೊಂದಿಗೆ ಅಣ್ಣ-ತಂಗಿಯರ ವಿಶೇಷ ಅನುಬಂಧದ ದಿನವನ್ನಾಗಿ ಎಲ್ಲೆಡೆ ಆಚರಿಸಲ್ಪಡುವುದು ವಿಶೇಷ.

ಪೂಜೆಯ ಅಂಗವಾಗಿ ದೇವಸ್ಥಾನ ಮತ್ತು ಹುತ್ತಗಳಿಗೆ ಭೇಟಿ ನೀಡಿ ಎಲ್ಲಾ ಕೆಡುಕುಗಳಿಂದ ನಮ್ಮನ್ನು ರಕ್ಷಿಸೆಂದು ಜನರು ಹುತ್ತಗಳಿಗೆ ಹಾಲೆರೆಯುವುದು ಕಂಡು ಬರುತ್ತದೆ.

ನಮ್ಮ ಪುರಾಣಗಳಲ್ಲಿ ಈ ದಿನದ ಪ್ರಾಮುಖ್ಯತೆ ಅನೇಕ ಕಥೆಗಳಲ್ಲಿ ಮತ್ತು ಜನಪದ ಕಥನಗಳಲ್ಲಿ ಉಲ್ಲೇಖವಿದೆ.

ವಿಷ್ಣುವಿನೊಡನೆ ಕ್ಷೀರಸಾಗರದಲ್ಲಿ ಸದಾ ನೆಲೆಸಿರುವ ಸಹಸ್ರ ಹೆಡೆಗಳ ಆದಿಶೇಷ, ಶಿವನ ಆಭರಣವಾದ ನಾಗ, ಶ್ರೀರಾಮನ ಸಹೋದರ ಆದಿಶೇಷಾಂಶನಾದ ಲಕ್ಷ್ಮಣ, ಶ್ರೀಕೃಷ್ಣನಿಗೆ ಶರಣಾದ ಕಾಲಿಯಾ ನಾಗ, ಅನಂತ, ವಾಸುಕಿ, ಕಂಬಲ, ತಕ್ಷಕ, ಶಂಖಪಾಲ ಮುಂತಾದ ಅನೇಕ ಜಾತಿಗಳ ನಾಗಸಂತತಿ ನಮ್ಮ ಸನಾತನ ಸಂಸ್ಕೃತಿಯ ಭಾಗವಾಗಿದೆ.

ಒಂದಾನೊಂದು ಊರಿನಲ್ಲಿ ತನ್ನ ನಾಲ್ಕು ಜನ ಅಣ್ಣಂದಿರೊಂದಿಗೆ ವಾಸವಗಿದ್ದ ಹೆಣ್ಣು ಮಗಳೊಬ್ಬಳು ನಾಗರ ಪಂಚಮಿಯ ಪೂಜೆಯಲ್ಲಿದ್ದಾಗ ನಾಗರ ಹಾವೊಂದು ಅವಳ ಅಣ್ಣಂದಿರನ್ನು ಬಲಿ ತೆಗೆದುಕೊಂಡಾಗ ನಾಗನ ಭಕ್ತೆಯಾಗಿದ್ದು ದುಖದಲ್ಲಿ ಮುಳುಗಿದ್ದ ಅವಳ ನೋವನ್ನು ನೋಡಲಾಗದೆ ನಾಗರ ಹಾವು ಅವಳ ಅಣ್ಣಂದಿರಿಗೆ ಮರಳಿ ಜೀವದಾನ ಮಾಡಿತೆಂಬ ಕಥೆಯಿದೆ.

ಅಂತೆಯೇ ಜನಮೇಜಯ ರಾಜನ ತಂದೆ ಪರೀಕ್ಷಿತ ರಾಜ ಸರ್ಪವೊಂದರ ನಿಮಿತ್ತ ಅಸುನೀಗಿ ಮೋಕ್ಷ ಪಡೆದುದನ್ನು ಅರಿತ ಜನಮೇಜಯ ಸರ್ಪಯಾಗವನ್ನು ನೆರವೇರಿಸಿ ನಾಗರ ಪಂಚಮಿಯಂದು ಸಮಾಪ್ತಿಗೊಳಿಸಿದ ಎನ್ನುವ ನಂಬಿಕೆಯಿದೆ.

ಇಂತಹ ಎಲ್ಲಾ ಆದಿ ಕಾಲದ ನಂಬಿಕೆಗಳೊಂದಿಗೆ ಆಚಾರ ಪದ್ಧತಿಯಲ್ಲಿ ನಾಗರ ಪಂಚಮಿಯಂದು ಉಪವಾಸ, ವ್ರತ ಮತ್ತು ನಿಯಮಗಳ ಪಾಲನೆ ನಡೆಯುತ್ತದೆ.

ನಾಗನ ಪೂಜೆ, ಹುತ್ತಕ್ಕೆ ಹಾಲೆರೆಯುವುದು ನಮ್ಮ ಪರಂಪರೆಯ ದ್ಯೋತಕ, ಆದರೆ ನಮ್ಮ ಬದುಕಲ್ಲಿ ಪ್ರಕೃತಿಯೊಡನೆ ನಮಗಿರುವ ಅನುಬಂಧದ ದ್ಯೋತಕ ಈ ಭೂಮಿಯ ಎಲ್ಲಾ ಜೀವಿಗಳೊಂದಿಗೂ ನಮಗೆ ನ್ಯೋನ್ಯ ಭಾವವಿರಬೇಕೆನ್ನುವುದು ಸೂಕ್ತ.

ವೈಜ್ಞಾನಿಕ ನಿಲುವಿನಲ್ಲಿ ಯೋಚಿಸಿದಾಗ ಹುತ್ತಕ್ಕೆ ಹಾಲೆರೆಯುವುದು, ಹಾವು ಹಾಲನ್ನು ಕುಡಿಯುವುದು ಮುಂತಾದವನ್ನು ವಿಜ್ಞಾನ ಒಪ್ಪುವುದಿಲ್ಲ.

ಎಲ್ಲಕ್ಕಿಂತಾ ಮುಖ್ಯವಾಗಿ ನಮ್ಮ ಪರಿಸರದಲ್ಲಿ ವಾಸಿಸುವ ಜೀವಿಗಳಿಗೆ ಉಪದ್ರವ ನೀಡುವುದು ತರವಲ್ಲ.

ಲೋಕಹಿತವನ್ನು ಬಯಸುವ ನಾವು ಯಾವುದೇ ಕಾರಣಕ್ಕೂ ನಮ್ಮ ಪರಿಸರದಲ್ಲಿರುವ ಜೀವಜಂತುಗಳಿಗೆ ಹಾನಿ ಮಾಡಬಾರದು.

ನಾಗರಪಂಚಮಿಯಂದು ಹುತ್ತಗಳ ಬಳಿ ತೆರಳಿ ಹಾಲೆರೆಯುವುದು ಹಬ್ಬದ ಆಚರಣೆ. ಆದರೆ ಅಲ್ಲಿನ ಸುತ್ತ ಇರುವ ಪರಿಸರಕ್ಕೆ ಹಾನಿ ಮಾಡಬಾರದಲ್ಲವೇ?

ನಿಜವಾದ ಹಾವನ್ನು ಕಂಡರೆ ಹೆದರುವ ಅಥವಾ ಕೊಲ್ಲಲು ಮುಂದಾಗುವ ನಾವು ಮಾಡುವುದು ಜೀವಹಾನಿಯಲ್ಲವೇ?

ಸಾರ್ವಜನಿಕ ಉದ್ಯಾನವನಗಳಲ್ಲಿ, ದೇವಸ್ಥಾನಗಳ ಸುತ್ತಾ ಇರುವ ಹುತ್ತಗಳ ಬಳಿ ಹಬ್ಬದ ನಂತರ ಕಾಣಬರುವ ಪರಿಸರಕ್ಕೆ ಹಾನಿಯೆಸಗುವ ಪ್ಲಾಸ್ಟಿಕ್ ಮತ್ತು ವಿನಾಶಕಾರಿ ತ್ಯಾಜ್ಯಗಳು ಕಾಣಬರುವುದು ಅತಿ ಆತಂಕಕಾರಿ ವಿಚಾರ.

ಅನೇಕ ಪ್ರಜ್ಞಾವಂತ ಆಸ್ತಿಕ ಬಂಧುಗಳು ತಮ್ಮ ಮನೆಯಲ್ಲಿರುವ ಬೆಳ್ಳಿ ನಾಗರಕ್ಕೆ ಆಚರಣೆಯ ಕುರುಹಾಗಿ ಹಾಲೆರೆಯುತ್ತಾರೆ.

ಮನೆಯಲ್ಲಿ ಭಕ್ತಿಯಿಂದ ನಾಗನನ್ನು ಪೂಜಿಸಿ ಅಣ್ಣ ತಂಗಿಯರು ಒಡಗೂಡಿ ಅನಾಥ ಮಕ್ಕಳಿಗೆ, ವೃದ್ಧರಿಗೆ ಮತ್ತು ವಿಕಲಾಂಗರಿಗೆ ಅದೇ ಹಾಲನ್ನು ಪ್ರಸಾದದ ರೂಪದಲ್ಲಿ ಕೊಟ್ಟಲ್ಲಿ ಪರಿಸರಕ್ಕೆ ಹಾನಿಯೂ ಆಗದು, ಹಬ್ಬವೂ ಸಾರ್ಥಕವೆನಿಸುವುದು.

**ಕಲ್ಲ ನಾಗರ ಕಂಡರೆ ಹಾಲನೆರೆ ಎಂಬರು,**
**ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯ!**

ಎಂದು ಬಸವಣ್ಣನವರು ನುಡಿದಿರುವುದು ಇದಕ್ಕೇ ಅಲ್ಲವೇ?

ಹಬ್ಬಗಳ ಆಚರಣೆ ಬಾಹ್ಯವಾಗಿರದೇ ಸೂಕ್ಷ್ಮವಾಗಿ ಅಥವಾ ಸೂಚ್ಯವಾಗಿಯೂ ಆಚರಿಸಬಹುದು.

ನಾಗರ ಪಂಚಮಿ ಹಬ್ಬ ಅಥವಾ ಇನ್ನಾವುದೇ ಹಬ್ಬಗಳು

ಪುಟ 9 ಕ್ಕೆ ➢

# ಎಸ್. ನಾಗರಾಜ್ – ಕೆಲವು ನೆನಪುಗಳು

**ಶ್ವೇತಾದಿ**
ನಿವೃತ್ತ ಮುಖ್ಯ ಶಿಕ್ಷಕರು

ಜುಲೈ 4, 2019. ಪ್ರಾತಃರ್ವಿಧಿಗಳೆಲ್ಲಾ ಮುಗಿದಿತ್ತು. ಕೆಲವೇ ಸಮಯದಲ್ಲಿ ಫೋನ್ ಕರೆ ಬಂತು. ಅದು ಎಸ್. ಎನ್. ರಶ್ಮಿಯವರ ಕರೆ. ದುಃಖಭರಿತ ಧ್ವನಿಯಲ್ಲಿ ನನ್ನ ತಂದೆ ಇನ್ನಿಲ್ಲ ಎಂದು ಹೇಳಿದರು. ಆ ಕ್ಷಣ ನನಗಾದ ಆಘಾತ ಮಾತಿಗೆ ಮೀರಿದ್ದು. ಕಾರಣ ರಶ್ಮಿಯವರ ತಂದೆ ಎಸ್. ನಾಗರಾಜ್. ನನ್ನ ಮತ್ತು ಎಸ್. ನಾಗರಾಜ್ (ಎಸ್. ಎನ್)ರವರ ಬಾಂಧವ್ಯ 43 ವರ್ಷಗಳ ದೀರ್ಘ ಕಾಲದ್ದು. ಅವರಿಗೆ ಕೆಲವು ದಿನಗಳಿಂದ ಸ್ವಲ್ಪ ಮಟ್ಟಿನ ಅನಾರೋಗ್ಯವಿದ್ದರೂ ಅದು ಅವರ ಜೀವನವನ್ನು ಕೊನೆಗೊಳಿಸುತ್ತದೆ ಎಂದು ಯಾರೂ ಭಾವಿಸಿರಲಿಲ್ಲ. ಅವರ ಆರೋಗ್ಯ ಸುಧಾರಿಸುತ್ತಿದ್ದು, ಚೇತರಿಸಿಕೊಳ್ಳುತ್ತಿರುವ ಸುದ್ದಿ ಸಮಾಧಾನ ತಂದಿತ್ತು. ಇದ್ದಕ್ಕಿದ್ದಂತೆ ಅವರ ಆರೋಗ್ಯದಲ್ಲಿ ಏರುಪೇರಾಗಿ ದೈವಾಧೀನರಾದುದು ನಿಜಕ್ಕೂ ಆಘಾತವೇ ಸರಿ. ಶ್ರೀಯುತರಿಗೆ ಈಗಷ್ಟೇ 70 ವರ್ಷವಾಗಿತ್ತು.

ಎಸ್. ನಾಗರಾಜ್ ಯಾರು ? ಅವರ ಬಗೆಗಿನ ಪ್ರಸ್ತಾಪ, ಲೇಖನ ಶಿಕ್ಷಕ ಸಮಾಚಾರದಲ್ಲಿ ಏಕೆ ? ಶಿಕ್ಷಕ ಸಂಘದಲ್ಲಿ ಅವರ ಪಾತ್ರವೇನು ? ಮೊದಲಾದ ಪ್ರಶ್ನೆಗಳು ಮನದಲ್ಲಿ ಮೂಡುವುದು ಸಹಜ.

ಎಸ್. ನಾಗರಾಜ್‌ರವರು ಬೆಂಗಳೂರು ದಕ್ಷಿಣ ಜಿಲ್ಲೆಯ ಬನಶಂಕರಿ 1ನೇ ಹಂತದಲ್ಲಿರುವ ಸ್ವಾಮಿ ವಿವೇಕಾನಂದ ವಿದ್ಯಾಶಾಲೆಯಲ್ಲಿ ಗಣಿತದ ಅಧ್ಯಾಪಕರಾಗಿ 32 ವರ್ಷಗಳ ದೀರ್ಘ ಸಾರ್ಥಕ ಸೇವೆಯನ್ನು ಸಲ್ಲಿಸಿದವರು. ವಿದ್ಯಾರ್ಥಿಗಳಿಗೆ ಗಣಿತ ಕಬ್ಬಿಣದ ಕಡಲೆ ಎನ್ನುವದು ಸರ್ವವಿದಿತ. ಅದರಲ್ಲೂ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗಂತೂ ಎಷ್ಟು ಕಷ್ಟವೆಂದು ಹೇಳಬೇಕಾಗಿಲ್ಲ. ಅಂತಹ ವಿದ್ಯಾರ್ಥಿಗಳಿಗೆ ಕಠಿಣವೆನಿಸುವ ಗಣಿತವನ್ನು ಸಾಧ್ಯವಾದಷ್ಟೂ ಲವಲವಿಕೆ, ಉತ್ಸಾಹದಿಂದ ಕಲಿಸುತ್ತಿದ್ದವರು ಎಸ್. ಎನ್. ವಿದ್ಯಾರ್ಥಿಗಳ ಬಗೆಗಿನ ಪ್ರೀತಿ, ವಾತ್ಸಲ್ಯಗಳಿಂದಾಗಿ ಎಸ್. ಎನ್. ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರು. ತರಗತಿಗಳಲ್ಲಿ ಪಾಠ ಮಾಡುವಲ್ಲಿ, ಶಾಲೆಯ ಹಾಗೂ ಇತರ ಎಲ್ಲಾ ಕೆಲಸಗಳಲ್ಲಿ ಅವರ ಶ್ರದ್ಧೆ, ಪ್ರಾಮಾಣಿಕತೆ, ನಿಷ್ಠೆ, ಅಚ್ಚುಕಟ್ಟುತನ ಎದ್ದು ಕಾಣುತ್ತಿತ್ತು. ಇತರರಿಗೂ ಅನುಕರಣೀಯ ವಾಗಿತ್ತು. ವಿದ್ಯಾರ್ಥಿಗಳಿಗೆ ಲೆಕ್ಕ ತಲೆಗೆ ಹತ್ತುವವರೆಗೂ ಛಲ ಬಿಡದ ತ್ರಿವಿಕ್ರಮನಂತೆ, ಬೇಸರಿಸದೆ, ಎಷ್ಟು ಬಾರಿಯಾದರೂ ಸರಿ ಮಾಡಿಸುತ್ತಿದ್ದರು. ಪರಿಣಾಮವಾಗಿ ಕನ್ನಡ ಮಾಧ್ಯಮದಲ್ಲೂ ಗಣಿತದಲ್ಲಿ ಒಳ್ಳೆಯ ಫಲಿತಾಂಶವೇ ಬರುತ್ತಿತ್ತು.

2007ರಲ್ಲಿ ಎಸ್. ಎನ್. ಶಿಕ್ಷಕ ವೃತ್ತಿಯಿಂದ ನಿವೃತ್ತರಾದರು. ನಂತರ ಅವರನ್ನು ಖಜಾಂಚಿಯಾಗಿ ನೇಮಕ ಮಾಡುವ ಮೂಲಕ ಅವರ ಸೇವೆಯನ್ನು ಆಡಳಿತ ವರ್ಗ ಬಳಸಿಕೊಳ್ಳಲು ಬಯಸಿತು. ಅಂದಿನಿಂದ ಅವರ ಕಡೆಯ ದಿನದವರೆಗೂ ಎಸ್. ಎನ್. ತಮ್ಮ ಕೆಲಸವನ್ನು ನಿಸ್ಪೃಹತೆಯಿಂದ ಅಚ್ಚುಕಟ್ಟಾಗಿ ನಿರ್ವಹಿಸಿದರು. ಸಂಸ್ಥೆಯ ಲೆಕ್ಕ ಪ್ರತಗಳಲ್ಲಿ ಯಾವುದೇ ಸಣ್ಣ ಲೋಪವೂ ಇರದಂತೆ ಖಜಾಂಚಿಯ ಜವಾಬ್ದಾರಿಯನ್ನು ನಿರ್ವಹಿಸಿದರು.

ಎಸ್. ನಾಗರಾಜ್‌ರವರು ತಮ್ಮನ್ನು ಶಾಲೆ, ಪಾಠಪ್ರವಚನಗಳಿಗೆ ಸೀಮಿತಗೊಳಿಸಿಕೊಂಡಿದ್ದೇ ಹೆಚ್ಚು. ಇತರ ಹವ್ಯಾಸಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ ಎನ್ನುವಂತೆಯೇ ಅವರ ನಡವಳಿಕೆ ಇರುತ್ತಿತ್ತು. ಹೀಗಿರುವಾಗ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಬೆಂಗಳೂರು ದಕ್ಷಿಣ ಜಿಲ್ಲೆಯ ಗಣಿತ ಶಿಕ್ಷಕರಿಗೆ ಪುನಃಶ್ಚೇತನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಅದರಲ್ಲಿ ಭಾಗವಹಿಸಿದ್ದ ಎಸ್. ಎನ್. ಅಭಿಮತ ಪತ್ರದಲ್ಲಿ ಶಿಕ್ಷಕ ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸಲು ಆಸಕ್ತಿ ಇರುವುದಾಗಿ ತಿಳಿಸಿದ್ದರು. ಇದು ನನಗೆ ನಿಜಕ್ಕೂ ಆಶ್ಚರ್ಯವನ್ನುಂಟುಮಾಡಿತ್ತು. ಅನಂತರ ಅವರನ್ನು ಶಿಕ್ಷಕ ಸಂಘದ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳಲಾಯಿತು. ಅವರು ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲೂ ಶ್ರದ್ಧೆಯಿಂದ, ಸಕ್ರಿಯವಾಗಿ ತಮ್ಮನ್ನು ಎಲೆಮರೆಯ ಕಾಯಿಯಂತೆ ತೊಡಗಿಸಿಕೊಳ್ಳುತ್ತಿದ್ದರು.

ಬೆಂಗಳೂರು ದಕ್ಷಿಣ ಜಿಲ್ಲೆಯು ಪ್ರತಿವರ್ಷ ನಡೆಸುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಎಸ್. ಎನ್.ರವರ ಪಾತ್ರ ಮುಖ್ಯವಾದುದು. ಶಾಲೆಗಳಿಗೆ ಮೊದಲ ಪತ್ರಕಗಳನ್ನು ಅಂಚೆಗೆ ಕಳುಹಿಸುವ ಕೆಲಸದಿಂದ ಹಿಡಿದು ಪ್ರತಿ ವಿದ್ಯಾರ್ಥಿಯ ಆಸನದ ವ್ಯವಸ್ಥೆಯನ್ನು ನಿಖರವಾಗಿ ಮಾಡುತ್ತಿದ್ದರು. ಸಮಾರಂಭದ ಆಹ್ವಾನದೊಂದಿಗೇ ಪ್ರತಿ ವಿದ್ಯಾರ್ಥಿಗೂ ತಾನು ಕುಳಿತು ಕೊಳ್ಳಬೇಕಾದ ಆಸನವೂ ತಿಳಿದಿರುತ್ತಿತ್ತು. ಆಸನ ವ್ಯವಸ್ಥೆಯಲ್ಲಿ ಯಾವುದೇ ಗೊಂದಲ ಇರುತ್ತಿರಲಿಲ್ಲ. ಬಹುಶಃ ಪ್ರತಿಭಾ ಪುರಸ್ಕಾರದ ಆಸನ ವ್ಯವಸ್ಥೆಯಲ್ಲಿ ಎಸ್. ಎನ್.ರವರ ಇಲ್ಲದಿರುವಿಕೆ ಈಗ ಎದ್ದು ಕಾಣಿಸಬಹುದು. ಇದರಲ್ಲಿ ಅವರು ಅನುಸರಿಸುತ್ತಿದ್ದ ಕ್ರಮ ಅನುಸರಣೀಯ ಎಂದು ಭಾವಿಸುತ್ತೇನೆ. ಮಾಧ್ಯಮಿಕ ಶಿಕ್ಷಕ ಸಂಘದ ಲೆಕ್ಕ ಪತ್ರಗಳನ್ನು ಹೆಚ್ಚು ಕ್ರಮಬದ್ಧವಾಗಿ ನಿರ್ವಹಿಸಲು ಎಸ್. ಎನ್. ರವರ ಮಾರ್ಗದರ್ಶನ ಹಾಗೂ ಕೊಡುಗೆ ಬಹಳ. ಸಂಘದ ಆಂತರಿಕ ಲೆಕ್ಕ ಪರಿಶೋಧಕರಾಗಿ ಲೆಕ್ಕಪತ್ರಗಳನ್ನು ಪರಿಶೋಧಿಸುವ ಕೆಲಸವನ್ನು ಅವರು ಸಮರ್ಥವಾಗಿ ನಿರ್ವಹಿಸುತ್ತಿದ್ದರು.

ಎಸ್. ನಾಗರಾಜ್ ಸ್ವಭಾವತಃ ಮಿತ ಭಾಷಿ. ಮಾತು ಕಡಮೆ, ಸದಾ ದುಡಿಮೆಯ ಮನೋಭಾವ ಅವರದು. ಮಾತು ಮಿತವಾದರೂ ಸ್ನೇಹಪರತೆ ಅವರಲ್ಲಿ ಎದ್ದು ಕಾಣುತ್ತಿತ್ತು. ಅವರ ನಡೆ, ನುಡಿ, ಆಚಾರ ವಿಚಾರಗಳು ಸದಾ ಸ್ಮರಣೀಯ. ಎಸ್. ಎನ್. ರವರಿಗೆ ಭಗವಂತ ಸದ್ಗತಿಯನ್ನು ನೀಡಿ, ಅವರ ಕುಟುಂಬದವರು, ಮಿತ್ರರಿಗೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸೋಣ. ●

ಭೂರಮೆ

# ಮೇಧಾದೇವಿ – ಶ್ರೀ ವರಲಕ್ಷ್ಮೀ

**ನಂ. ನಾಗಲಕ್ಷ್ಮಿ**
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ಹಿಂದೂ ಪಂಚಾಂಗದಲ್ಲಿ ಶ್ರಾವಣ ಮಾಸವು ಅತ್ಯಂತ ಪವಿತ್ರವೆಂದು ಪರಿಗಣಿತವಾಗಿದೆ. ವೇದಗಳಲ್ಲಿ ಕೂಡ ಶ್ರಾವಣ ಮಾಸದ ಮಹತ್ತ್ವದ ಪ್ರಸ್ತಾಪವಿದೆ. ಶ್ರಾವಣ ಪೌರ್ಣಮಿಯು ಮಹಾವಿಷ್ಣುವಿನ ನಕ್ಷತ್ರವಾದ ಶ್ರವಣ ನಕ್ಷತ್ರದೊಂದಿಗೆ ಹೊಂದಿಕೆಯಾಗುವುದರ ಕಾರಣದಿಂದ ಇಡೀ ಮಾಸವನ್ನು ಶ್ರಾವಣಮಾಸವೆಂದು ಕರೆಯುವುದು ರೂಢಿಯಾಯಿತೆನ್ನಲಾಗಿದೆ.



ಶ್ರಾವಣಮಾಸ ಬಂತೆಂದರೆ ಹಬ್ಬಗಳು ಸಾಲುಸಾಲಾಗಿ ಬರುವ ಸಂಭ್ರಮವೇ, ಇಡೀ ತಿಂಗಳು ಹಬ್ಬಗಳೇ. ಶ್ರಾವಣ ಶುಕ್ರವಾರವು 'ವರಮಹಾಲಕ್ಷ್ಮೀ ವ್ರತ' ದ ಆಚರಣೆಯ ಪವಿತ್ರ ದಿನವಾಗಿದೆ. ಸಂಪತ್ಸಮೃದ್ಧಿಯ ಸಂಕೇತವಾಗಿರುವ ಮಹಾಲಕ್ಷ್ಮೀಯನ್ನು ಆದಿಲಕ್ಷ್ಮೀ, ಧಾನ್ಯಲಕ್ಷ್ಮೀ, ವಿಜಯಲಕ್ಷ್ಮೀ, ಧನಲಕ್ಷ್ಮೀ, ವಿದ್ಯಾಲಕ್ಷ್ಮೀ, ಸಂತಾನಲಕ್ಷ್ಮೀ, ಧೈರ್ಯಲಕ್ಷ್ಮೀ, ಸೌಭಾಗ್ಯಲಕ್ಷ್ಮೀ ಎಂದು ಅಷ್ಟಲಕ್ಷ್ಮೀಯರ ರೂಪಗಳನ್ನು ಹೊಂದಿ ಎಲ್ಲ ಸಂಪತ್ತುಗಳನ್ನು ಕರುಣಿಸುವ ದೇವಿಯೆಂದು ಪೂಜಿಸಿ, ವರಗಳನ್ನು ಕೊಡುವ ವರಲಕ್ಷ್ಮೀಯೆಂದು ಸ್ತುತಿಸಿ ಆಕೆಯ ಕೃಪೆಗೆ ಪಾತ್ರವಾಗುವ ಈ ವ್ರತವನ್ನು ಶಿವನು ಪಾರ್ವತಿಗೆ ವಿವರಿಸಿದನೆಂದು ಸ್ಕಾಂದಪುರಾಣದಲ್ಲಿ ಹೇಳಿದೆ.

'ಲಕ್ಷ್ಮೀ ಎಂದರೆ ಸಂಪತ್ತು, ಸಿರಿ, ಭಾಗ್ಯ, ಐಶ್ವರ್ಯ ಎಂದೆಲ್ಲ ಅರ್ಥವಿದೆ, ನಿಜ. ಆದರೆ, ಆಕೆಯನ್ನು ಕೇವಲ ಹಣ, ಐಶ್ವರ್ಯಗಳ ದೇವತೆ ಎಂದಷ್ಟೇ ಭಾವಿಸಬಾರದು. ಸಂಪತ್ತಿನ ದೇವತೆ ಎಂದರೆ ನಮ್ಮ ಬದುಕನ್ನು ಸರ್ವತೋಮುಖವಾಗಿ ಶ್ರೀಮಂತಗೊಳಿಸುವ ದೇವಿ ಎಂದೇ ತಿಳಿಯಬೇಕು. ಗುಣ ಸಂಪತ್ತು, ಧೈರ್ಯಸಂಪತ್ತು, ಬೌದ್ಧಿಕ ಸಂಪತ್ತು ಇತ್ಯಾದಿ. ಹಲವು ವಿಧಗಳ ಸಂಪತ್ತು ಲಭಿಸಿದಾಗಲೇ ಮಾನವ ಬದುಕು ಸಮೃದ್ಧವಾಗುತ್ತದೆ. ಆಕೆ ಸರ್ವಸದ್ಗುಣಗಳ ಒಡತಿಯಾದ ಸಿರಿಲಕ್ಷ್ಮೀ. ನಮ್ಮ ಆತ್ಮೋದ್ಧಾರಕ್ಕೆ ಅಗತ್ಯವಿರುವ ಎಲ್ಲ ಸದ್ಗುಣಗಳನ್ನೂ, ಮುಖ್ಯವಾಗಿ ಜ್ಞಾನಸಂಪತ್ತನ್ನು ನೀಡುವ ದೇವಿ. ಎಲ್ಲ ಬಗೆಯ ಕಲಾಸಂಪತ್ತುಗಳಿಗೂ ಕೂಡ ಆಕೆಯೇ ಒಡತಿ. ಹಾಗಾಗಿಯೇ ಆಕೆಯನ್ನು ವರಮಹಾಲಕ್ಷ್ಮೀ ಎಂದು ನಮ್ಮ ಸಂಸ್ಕೃತಿಯಲ್ಲಿ ಗೌರವಿಸಲಾಗಿದೆ. ಎಲ್ಲ ಬಗೆಯ ಸಕಾರಾತ್ಮಕ ವರಗಳನ್ನು ನೀಡುವ ದೇವಿಯೇ ಈ ವರಮಹಾಲಕ್ಷ್ಮೀ.

ಅನೇಕ ದೇವೀ ಸೂಕ್ತಗಳಲ್ಲಿ ಈ ಮಹಾಲಕ್ಷ್ಮೀ ದೇವಿಯನ್ನು ವೈಶಿಷ್ಟಪೂರ್ಣವಾಗಿ ವಿವರಿಸಲಾಗಿದೆ. ಶ್ರೀ–ಭೂ–ಮಹೀ–ಅದಿತಿ–ವಾಗಂಭೃಣೇ– ಮೇಧಾ–ಸ್ವಧಾ–ಶ್ರದ್ಧಾ– ಇಳಾ ಮುಂತಾದ ದೇವೀ ಸೂಕ್ತಗಳಲ್ಲಿ ಲಕ್ಷ್ಮೀ ದೇವಿಯನ್ನು ವಿವರವಾಗಿ ಚಿತ್ರಿಸಲಾಗಿದೆ. ಎಲ್ಲದರ ಅಂತರಾರ್ಥವೆಂದರೆ ಪರಬ್ರಹ್ಮ ಅಥವಾ ಪರಮಪುರಷ ಎನ್ನುವ ಆ ಪರತತ್ತ್ವದೊಂದಿಗೆ ಅವಿನಾಭಾವದಿಂದ ಸೇರಿಕೊಂಡಿರುವ ಪ್ರಕೃತಿತತ್ತ್ವವೇ ಶ್ರೀ ಮಹಾಲಕ್ಷ್ಮೀ ಎನ್ನುವುದು ಋಷಿವಾಕ್ಯವಾಗಿದೆ. ಪರಮಾತ್ಮನು ಪರಮಪುರುಷನಾದರೆ ಆತನೊಳಗಿನ ಚೈತನ್ಯ, ಶಕ್ತಿಯ ಆವಿರ್ಭಾವವೇ ಶ್ರೀ ಲಕ್ಷ್ಮೀ ಸ್ವರೂಪ ಎಂದು ಅನೇಕ ಸೂಕ್ತಗಳು ವಿಶದಪಡಿಸಿವೆ.

ಲಕ್ಷ್ಮೀದೇವಿಯು ಸಮುದ್ರರಾಜನ ಮಗಳು. ಸಮುದ್ರಮಥನದ ಸಂದರ್ಭದಲ್ಲಿ ಜನಿಸಿದ ದೇವತೆ. ಚಂದ್ರನಿಗೆ ಸೋದರಿ. ಈಕೆಯನ್ನು ಸ್ತುತಿಸುವ ಶ್ಲೋಕವಿದು.

**ಸಿದ್ಧಲಕ್ಷ್ಮೀ ಮೋಕ್ಷಲಕ್ಷ್ಮೀ ಜಯಲಕ್ಷ್ಮೀ ವಿದ್ಯಾಲಕ್ಷ್ಮೀ**
**ಶ್ರೀ ಲಕ್ಷ್ಮೀ ವರಲಕ್ಷ್ಮೀ ಧೈರ್ಯಲಕ್ಷ್ಮೀ ಯಶೋಲಕ್ಷ್ಮೀಶ್ಚ**
**ಪ್ರಸನ್ನಾ ಮಮ ಸರ್ವದಾ॥**

ಹರಿದಾಸರಂತೂ ತಮ್ಮ ದಾಸಸಾಹಿತ್ಯದಲ್ಲಿ ಲಕ್ಷ್ಮೀದೇವಿಯನ್ನು ಪರಿಪರಿಯಾಗಿ ಸ್ತುತಿಸಿದ್ದಾರೆ. ಈಕೆ ನೆಲೆಸಿರುವುದೇ ನಾರಾಯಣನ ವಕ್ಷಸ್ಥಳದಲ್ಲಿ. ಆತ ಅದಕ್ಕೇ ಶ್ರೀನಿವಾಸನೆನಿಸಿದ್ದಾನೆ. ವಿಷ್ಣುಪತ್ನಿ ಯಾದ ಈಕೆಯ ನಾಲ್ಕು ಬಾಹುಗಳು ಹಿಂದೂಧರ್ಮದ ನಾಲ್ಕು ಧಾರೆಗಳಾದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪ್ರತಿನಿಧಿಸುತ್ತದೆ. ಈಕೆಗೆ ಕಮಲಪುಷ್ಪದೊಂದಿಗೆ ಅತಿಗಾಢವಾದ ಸಂಬಂಧವಿರುವುದೆಂದು ಸ್ತೋತ್ರಗಳಲ್ಲಿ, ಸೂಕ್ತಗಳಲ್ಲಿ ಹೇಳಿದೆ. ಈಕೆಗೆ ಹಲವು ಹೆಸರುಗಳುಂಟು. ಪದ್ಮಾ, ಕಮಲಾ, ಪದ್ಮಪ್ರಿಯಾ, ಪದ್ಮಮುಖೀ, ಪದ್ಮಾಕ್ಷೀ, ಪದ್ಮಮಾಲಾಧರಾದೇವೀ, ಪದ್ಮಸುಂದರೀ ಎಂದೆಲ್ಲ ವರ್ಣಿಸಲಾಗಿದೆ.

ಶ್ರೀಲಕ್ಷ್ಮೀಯು ನಾರಾಯಣನಿಗೆ ನಿಷ್ಠಳಾದವಳು. ಆತ 'ಅರ್ಥ' ವಾದರೆ ಈಕೆ 'ವಾಕ್' ಆಗುತ್ತಾಳೆ. ಆಕೆ 'ಶೀಲ' ವಾದರೆ ಆತ 'ಚಾರಿತ್ರ್ಯ' ವಾಗುತ್ತಾನೆ. ಆತ 'ಜ್ಞಾನ' ವಾದರೆ ಆಕೆ ಅಂತರ್ದೃಷ್ಟಿ ಯಾಗಿರುತ್ತಾಳೆ, ಆತ ಭೂಮಿಯನ್ನು ಹೊತ್ತವನಾದರೆ ಆಕೆ 'ಭೂಮಿ'ಯೇ ಆಗುತ್ತಾಳೆ, ಆತ 'ಸಮಾಧಾನ' ವೆನಿಸಿದರೆ ಆಕೆ 'ತೃಪ್ತಿ'ಯಾಗಿರುತ್ತಾಳೆ, ಆಕೆ 'ಆಕಾಶ'ವಾದರೆ ಆತ ಎಲ್ಲದರ ಸತ್ತ್ವ, ಆತ 'ಚಂದ್ರ', ಆಕೆ ಚಂದ್ರಮನ 'ಸೌಂದರ್ಯ', ಆಕೆ 'ತೀರ' ವಾದರೆ ಆತ 'ಸಾಗರ' ಹಾಗಾಗಿ ಅದು ಅವರಿಬ್ಬರ ಅದ್ಭುತ ಸಂಗಮ.

ವರಲಕ್ಷ್ಮೀ ವ್ರತವು ಕರ್ನಾಟಕದಲ್ಲಿ ಆಚರಿಸುವ ಅತ್ಯಂತ

ಪುಟ 9 ಕ್ಕೆ ➤

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೇಡಿಕೆ

**ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದಿಂದ ಬಂದಿರುವ ಬೇಡಿಕೆಗಳ ಪಟ್ಟಿಯಂತೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಬೇಡಿಕೆಗಳ ಪಟ್ಟಿಯನ್ನು ಪ್ರಾದೇಶಿಕ ಭಾಷೆಯಲ್ಲಿ ತಯಾರು ಮಾಡಿ ಅನೇಕ ಜಿಲ್ಲೆಯ ಕಾರ್ಯಕರ್ತರು ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ದಂಡಾಧಿಕಾರಿಗಳ ಮೂಲಕ ಮಾನ್ಯ ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ, ನವದೆಹಲಿ, ಮಾನ್ಯ ಮಾನವ ಸಂಪನ್ಮೂಲ ಮಂತ್ರಿಗಳು, ಭಾರತ ಸರ್ಕಾರ, ನವದೆಹಲಿ, ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು. ಮಾನ್ಯ ಶಿಕ್ಷಣ ಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ಮನವಿ ಸಲ್ಲಿಸಿದರು.**

## ಬೇಡಿಕೆಗಳು

1. ಮಾಧ್ಯಮಿಕ ಶಿಕ್ಷಣ ಆಯೋಗವನ್ನು ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಸ್ಥಾಪಿಸುವುದು.
2. ಜಿ.ಡಿ.ಪಿ ಯ ಶೇ. 10ನ್ನು ಕೇಂದ್ರ ಸರಕಾರದಿಂದ ಹಾಗೂ ರಾಜ್ಯ ತನ್ನ ಬಜೆಟ್‌ನ ಶೇ. 30% ನ್ನು ಶಿಕ್ಷಣದ ವಿಭಾಗದ ಮೇಲೆ ಖರ್ಚು ಮಾಡಬೇಕು.
3. ಕೇಂದ್ರೀಯ ಶಿಕ್ಷಕರ ಸಮಾನ ಏಳನೇ ವೇತನ ಆಯೋಗವನ್ನು ಎಲ್ಲಾ ರಾಜ್ಯಗಳಲ್ಲೂ ಜಾರಿಗೊಳಿಸಬೇಕು.
4. ನಿವೃತ್ತಿಯ ನಂತರ ಶಿಕ್ಷಕರು ಆರ್ಥಿಕವಾಗಿ ಸ್ವತಂತ್ರರಾಗಿರಲು ಹೊಸ ನಿವೃತ್ತಿಯೋಜನೆ (ಎನ್.ಪಿ. ಎಸ್) ನ್ನುತೆಗೆದು ಹಳೆ ನಿವೃತ್ತಿಯೋಜನೆಯನ್ನು ಜಾರಿಗೊಳಿಸಬೇಕು.
5. ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಖಾಲಿ ಇರುವ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡಬೇಕು.
6. ಮಾಧ್ಯಮಿಕ ಶಾಲೆಗಳಲ್ಲಿ ಇರುವ ವ್ಯಾವಸಾಯಿಕ, ಶಾರೀರಿಕ ಮತ್ತು ಕಂಪ್ಯೂಟರ್ ಶಿಕ್ಷಣ ನೀಡಲು ಶಿಕ್ಷಕರನ್ನು ಹುದ್ದೆಗಳನ್ನು ಭರ್ತಿ ಮಾಡಬೇಕು.
7. ಸಮಾನಕಾರ್ಯಕ್ಕೆ ಸಮಾನ ವೇತನ ಸಿದ್ಧಾಂತದ ಪಾಲನೆಯಾಗಬೇಕು. ದೇಶದಲ್ಲಿ ಸಮಾನ ಸೇವಾ ಷರತ್ತುಗಳು ಹಾಗೂ ಅನುಕೂಲಗಳನ್ನು ತರಬೇಕು. ತಿಂಗಳ ಮೊದಲನೇ ತಾರೀಖಿನಿಂದ ಶಿಕ್ಷಕರ ಖಾತೆಗೆ ವೇತನ ಜಮೆಯಾಗುವಂತೆ ಮಾಡಬೇಕು.
8. ಮಾಧ್ಯಮಿಕ ಶಿಕ್ಷಣದಲ್ಲಿ ಖಾಸಗಿ ಸಂಸ್ಥೆಗಳಿಂದ ನಡೆಯುತ್ತಿರುವ ವ್ಯಾಪಾರೀಕರಣವನ್ನುತಡೆಯಬೇಕು.
9. ಎಲ್ಲಾ ರಾಜ್ಯಗಳ ಶಿಕ್ಷಕರಿಗೂ ಕೇಂದ್ರೀಯ ಶಿಕ್ಷಕರಂತೆ ವೈದ್ಯಕೀಯ ಭತ್ಯೆ, ಆಸ್ಪತ್ರೆಗಳಲ್ಲಿ ದಾಖಲಾಗಲು ಅನುಕೂಲವಾಗುವಂತೆ ನೋಡಿಕೊಳ್ಳಬೇಕು.
10. ಸಮಗ್ರ ಶಿಕ್ಷಣ ಅಭಿಯಾನದಲ್ಲಿ ಅನುದಾನಿತ ಮತ್ತು ಅನುದಾನರಹಿತ ವಿದ್ಯಾಲಯಗಳಿಗೆ ಬೇದಭಾವ ಮಾಡದೆ ಸಮಾನ ಸೌಲಭ್ಯಗಳನ್ನು ನೀಡಬೇಕು.
11. ಸಂಪೂರ್ಣ ದೇಶದಲ್ಲಿ ಸೇವಾ ನಿವೃತ್ತಿಯ ವಯಸ್ಸನ್ನು 65 ವರ್ಷ ಮಾಡಬೇಕು.
12. ಶಿಕ್ಷಕರಿಗೆ ಅನ್ಯಕಾರ್ಯದಿಂದ (ಶಿಕ್ಷಣವಲ್ಲದೆ) ಮುಕ್ತಿಗೊಳಿಸಬೇಕು.
13. ಶಿಕ್ಷಣ ಕೆಡರ್ ಮಾಡಬೇಕು.
14. ಬಡ್ತಿ ಪ್ರಕ್ರಿಯನ್ನು ಸರಳಗೊಳಿಸಿ ಸರಿಯಾದ ಸಮಯಕ್ಕೆ ಮಾಡಬೇಕು.
15. ಮಗುವಿನ ಲಾಲನೆ ಪಾಲನೆ ಮಾಡುವ ರಜೆ, ಕುಟುಂಬದ ಲಾಲನೆ ಪಾಲನೆಯ ರಜೆ ನೀಡಬೇಕು
16. ಶಿಕ್ಷಣ ಅಧಿಕಾರ ಅಧಿನಿಮಯ ಪ್ರಕಾರ ಮಕ್ಕಳ ಮತ್ತು ಶಿಕ್ಷಕರ ಅನುಪಾತವನ್ನು 30:1 ಎಂದು ಮಾಡಬೇಕು
17. ಖಾಸಗಿ ಶಿಕ್ಷಣ ಸಂಸ್ಥೆಗಳು ತಮ್ಮ ವರಮಾನದ ಶೇ. 80ನ್ನು ಶಿಕ್ಷಕರ ವೇತನಕ್ಕಾಗಿ ಖರ್ಚು ಮಾಡಬೇಕು.
18. ಸಂಪೂರ್ಣ ಶಿಕ್ಷಣ ಒಂದೇ ಇಲಾಖೆಯ ಅಧೀನದಲ್ಲಿರಬೇಕು
19. ಪಿ ಎಫ್ ನ ಜಮೆಯಾದ ಹಣದಲ್ಲಿ ಸಾಲವನ್ನು ನೀಡುವಂತಾಗಬೇಕು.
20. ಸಿ ಸಿ ಇ ಯನ್ನು ತೆಗೆಯಬೇಕು.
21. ಶಿಕ್ಷಕ ಹುದ್ದೆಯ ಅರ್ಹತೆಯ ಶಿಕ್ಷಣಕಿಂತ ಹೆಚ್ಚಿನ ಶಿಕ್ಷಣ ಮಾಡಿದವರಿಗೆ ಹೆಚ್ಚುವರಿ ವೇತನ ನೀಡಬೇಕು.

# ಬಳೆಗಳ ಸದ್ದಿನ ನಡುವೆ, ಕ್ರಾಂತಿಯ ಕಹಳೆ


**ಭೀಮಸೇನ್ ಪುರೋಹಿತ್**
**ಡಾಟಾ ಸೈಂಟಿಸ್ಟ್**
**ಬೆಂಗಳೂರು**




ಈ ದೇಶದ ಸ್ತ್ರೀಯರು, ಪ್ರಾಚೀನಕಾಲದಿಂದಲೂ ರಾಷ್ಟ್ರದ, ಸಮಾಜದ ಹಿತಾಸಕ್ತಿಗೆ ಬದ್ಧವಾಗಿ ದುಡಿದಿದ್ದಾರೆ. ರಾಜಕೀಯ, ಕಲೆ, ಸಾಹಿತ್ಯಗಳಷ್ಟೇ ಅಲ್ಲ, ಯುದ್ಧಗಳಲ್ಲೂ ತಮ್ಮ ಪರಾಕ್ರಮವನ್ನು ಮೆರೆದವರಿದ್ದಾರೆ. ಕಾಕತೀಯ ಸಂಸ್ಥಾನದ ರಾಣಿ ರುದ್ರಮ್ಮ ದೇವಿ, ಚಿತ್ತೂರಿನ ರಾಣಿ ಪದ್ಮಿನಿ, ಉಲ್ಲಾಳದ ರಾಣಿ ಅಬ್ಬಕ್ಕ, ಕಿತ್ತೂರಿನ ರಾಣಿ ಚೆನ್ನಮ್ಮ, ಝಾನ್ಸಿಯ ರಾಣಿ ಲಕ್ಷ್ಮೀಬಾಯಿ, ದುರ್ಗದ ಓಬವ್ವ, ಹೀಗೆ ಸಾಲು ಸಾಲು ಹೆಸರುಗಳು ಚರಿತೆಯಲ್ಲಿ ಘರ್ಜಿಸಿವೆ. ಸ್ವಾತಂತ್ರ್ಯಕಾಲದಲ್ಲಂತೂ, ಬದುಕನ್ನು ಸಮರ್ಪಿಸಿದ ಅಸಂಖ್ಯಾತ ಯುವಕರ ಹಿಂದೆ ಅವರವರ ತಾಯಿ-ತಂಗಿ-ಹೆಂಡತಿಯರ ಮಹಾ ತ್ಯಾಗವಿದೆ. ಮೇಡಂ ಕಾಮಾ, ಶಕುಂತಲಾ ಧಮಂಕರ್, ಕ್ಯಾಲಕ್ಷ್ಮೀ ಸೆಹಗಲ್, ಪ್ರೀತಿಲತಾ ವದ್ದೆದಾರ್ ಮುಂತಾದ ಸ್ತ್ರೀರತ್ನಗಳು ಭಾರತೀಯ ಮುಕುಟವನ್ನು ಶೃಂಗರಿಸಿವೆ. ಇಂತಹ ಸ್ತ್ರೀಯರ ಸಾಲಿನಲ್ಲಿ ನಿಲ್ಲುವ ಮತ್ತೋರ್ವ ಧೀಮಂತೆ "ಕಲ್ಪನಾ ದತ್ತ".

ಚಿತ್ತಗಾಂಗ್ - ಪೂರ್ವ ಬಂಗಾಳದ ಒಂದು ಸಣ್ಣ ಊರು. ಅಲ್ಲಿಯ ಪ್ರಾಥಮಿಕ ಶಾಲೆಯೊಂದರ ಶಿಕ್ಷಕನಾಗಿದ್ದವನು ಸೂರ್ಯಸೇನ್. ಅದ್ಭುತ ರಾಷ್ಟ್ರೀಯ ಚಿಂತಕ. ಬಾಲ್ಯದಲ್ಲೇ ಸ್ವಾತಂತ್ರ್ಯ ಹೋರಾಟದತ್ತ ಆಕರ್ಷಿತನಾಗಿ ಬಂಗಾಳದ ಮಹಾನ್ ಕ್ರಾಂತಿಕಾರಿ ಸಂಸ್ಥೆ "ಅನುಶೀಲನ ಸಮಿತಿ"ಯ ಸದಸ್ಯನಾಗಿದ್ದ. ಚಿತ್ತಗಾಂಗ್ ನ ಸ್ವಾತಂತ್ರ್ಯ ಹೋರಾಟಕ್ಕಾಗಿ, ಅವನು ಮಾಡಿದ ಯೋಜನೆಗೆ ಶಾಲೆಯಲ್ಲಿ ಓದುತ್ತಿದ್ದ 14-15 ವರ್ಷದ ಬಾಲಕರೇ ಅವನೊಟ್ಟಿಗೆ ಕೈಜೋಡಿಸಿದರು. ಲೋಕನಾಥ್ ಬಲ್, ಅನಂತ ಸಿಂಹ, ಗಣೇಶ್ ಘೋಷ್ ಮೊದಲಾದ ಸಾಹಸಿಗರ ಗುಂಪೇ "ಇಂಡಿಯನ್ ರಿಪಬ್ಲಿಕನ್ ಆರ್ಮಿ"ಯ ಹೆಸರಿನಲ್ಲಿ ಸಂಘಟಿತವಾಗಿತ್ತು. ಈ ಸಂಘಟನೆಯ ಬಗ್ಗೆ ತಿಳಿದಿದ್ದ ಕಲ್ಪನಾ, ತಾನೂ ಸಂಘಟನೆಯ ಭಾಗವಾಗಲು ಹುಮ್ಮಸ್ಸಿನಿಂದ ಕೇಳಿಕೊಂಡಳು. ಅದರ ಪರಿಣಾಮವಾಗಿ ಕಲ್ಪನಾ ಮತ್ತವಳ ಗೆಳತಿ ಪ್ರೀತಿಲತಾ ಭಾರತದ ಅಧ್ಯಾಯದಲ್ಲಿ ಒಂದು ಕ್ರಾಂತಿ ಸಂಘದ ಕಂಬಗಳಾದರು. ಚಿತ್ತಗಾಂಗ್ ನಲ್ಲಿ ಮೆಟ್ರಿಕುಲೇಶನ್ ಮುಗಿಸಿದ್ದ ಕಲ್ಪನಾ, ಕಲ್ಕತ್ತಾದ ವಿಜ್ಞಾನ ಕಾಲೇಜಿನಲ್ಲಿ ಪದವಿಗಾಗಿ ಸೇರಿದ್ದಳು. ವಿಜ್ಞಾನದ ವಿದ್ಯಾರ್ಥಿಯೇ ಆಗಿದ್ದರಿಂದ ಬಾಂಬುಗಳ ತಯಾರಿಗೆ ಬೇಕಾದ ರಾಸಾಯನಿಕಗಳ ತಿಳುವಳಿಕೆ,ಮಾಹಿತ ಸಂಪೂರ್ಣ ಅವಳಲ್ಲಿತ್ತು. ಅಲ್ಲದೆ ಆ ಎಲ್ಲ ಪದಾರ್ಥಗಳನ್ನೂ ಆಕೆ ಸಂಗ್ರಹಿಸಿ ಇಟ್ಟಿದ್ದಳು. ಸೂರ್ಯಸೇನ್ ತನ್ನ ಸಂಘಟನೆಯ ಮೂಲಕ ಇಡೀ ಚಿತ್ತಗಾಂಗ್ ಅನ್ನು ಸ್ವತಂತ್ರಗೊಳಿಸಲು ನಕ್ಷೆ ಸಿದ್ಧಪಡಿಸಿದ್ದ.

ಏಪ್ರಿಲ್ 18 – 1930. ಎಲ್ಲರೂ ಅಂದು ಏಕಕಾಲಕ್ಕೆ, ನಿಗದಿಪಡಿಸಿದ ಜಾಗಗಳಿಂದ ದಂಗೆ ಏಳಲು ನಿರ್ಧರಿಸಲಾಗಿತ್ತು. ಗಣೇಶ್ ಘೋಶನ ತಂಡ ಪೊಲೀಸ್ ಶಸ್ತ್ರಾಗಾರವನ್ನು ವಶಪಡಿಸಿಕೊಂಡರೆ, ಲೋಕನಾಥನ ತಂಡ 'ಅರೆಸೈನ್ಯ'ದ ಶಸ್ತ್ರಾಗಾರಕ್ಕೆ ಮುತ್ತಿಗೆ ಹಾಕಿತು. ಅಂಬಿಕಾ ಚಕ್ರವರ್ತಿಯ ಜೊತೆಗಾರರು, ಚಿತ್ತಗಾಂಗ್ ಗೆ ಕೂಡುವ ಎಲ್ಲ ರೈಲ್ವೆ ಮಾರ್ಗವನ್ನು ಭಗ್ನಗೊಳಿಸಿದರು. ನಿರ್ಮಲ್ ಸೇನ್ ಟೆಲಿಗ್ರಾಫ್ ಸಂಪರ್ಕವನ್ನು ಕಡಿತಗೊಳಿಸಿದ. ಎಲ್ಲರೂ ಸೇರಿ ಭಾರತ ಧ್ವಜ ಹಾರಿಸಿ, ಚಿತ್ತಗಾಂಗ್ ಸ್ವತಂತ್ರವಾಗಿದೆ ಎಂದು ಘೋಷಿಸಿಯೇ ಬಿಟ್ಟರು. ಎಲ್ಲವೂ ಪ್ಲಾನಿನಂತೆ ಆಗಿದ್ದರೆ, ಎಲ್ಲರೂ ಸೌಖ್ಯವಾಗಿರುತ್ತಿದ್ದರೇನೋ. ಆದರೆ ಅಲ್ಲೊಂದಿಷ್ಟು ಎಡವಟ್ಟುಗಳಾಗಿದ್ದವು. ಬಂದೂಕುಗಳನ್ನು ವಶಪಡಿಸಿಕೊಂಡ ಕ್ರಾಂತಿಕಾರಿಗಳಿಗೆ ಮದ್ದು-ಗುಂಡುಗಳು ಸಿಗಲೇ ಇಲ್ಲ. ಬ್ರಿಟಿಷರು ಬಂದೂಕು ಹಾಗು ಗುಂಡುಗಳನ್ನು ಬೇರೆ ಬೇರೆ ಜಾಗಗಳಲ್ಲಿಟ್ಟಿರುತ್ತಾರೆಂಬ ವಿಷಯ ನಮ್ಮವರಿಗೆ ಗೊತ್ತೇ ಇರಲಿಲ್ಲ. ಅಷ್ಟೇ ಅಲ್ಲ, ಅವತ್ತು ಯೂರೋಪಿಯನ್ ಕ್ಲಬ್ ಮೇಲೆ ದಾಳಿ ಮಾಡಿ ಅಲ್ಲಿನ ಬ್ರಿಟಿಷರನ್ನು ಸೆರೆ ಹಿಡಿದು, ಅವರು ಊರು ಬಿಟ್ಟು ಕದಲದಂತೆ ಮಾಡಬೇಕೆನ್ನುವ ತಯಾರಿಯೂ ಇತ್ತು. ಆದರೆ ಅವತ್ತು ಗುಡ್ ಫ್ರೈಡೆ ಆಗಿದ್ದರಿಂದ ಆಂಗ್ಲರಾರೂ ಕ್ಲಬ್ ನಲ್ಲಿ ಇರಲೇ ಇಲ್ಲ..!!

ಇಂತಹ ಕೆಲವು ಲೋಪಗಳಿಂದ ಬ್ರಿಟಿಷರಿಗೆ ಕ್ರಾಂತಿಯ ಸುದ್ದಿ ಹೋಯಿತು. ಕ್ರಾಂತಿಕಾರಿಗಳೂ ಓಡಿಹೋಗಿ ಜಲಾಲಾಬಾದ್‌ನ ಗುಡ್ಡದಲ್ಲಿ ಅವಿತುಕೊಂಡರು. 15 ವರ್ಷದ ಬಾಲಕರೆಲ್ಲಿ, ಆಧುನಿಕ ಶಸ್ತ್ರಗಳನ್ನು ಪ್ರಯೋಗಿಸುತ್ತಿದ್ದ ಆಂಗ್ಲ ಸೈನಿಕರೆಲ್ಲಿ. ಆ ಗುಡ್ಡದಲ್ಲಿ ಘೋರ ಕದನವೇ ನಡೆಯಿತು. ವಯಸ್ಸು ಸಣ್ಣದಿದ್ದರೂ, ರಾಷ್ಟ್ರಭಕ್ತಿಯ ಕೆಚ್ಚಿಗೆ ಎಂಥವರೂ ಕೊಚ್ಚಿಕೊಂಡು ಹೋಗುತ್ತಾರೆಂಬ ಸಂದೇಶ ಅವತ್ತು ಆ ಹುಡುಗರಿಂದ ಜಗಜ್ಜಾಹೀರಾಗಿತ್ತು. ಕೆಲವು ಬಾಲಕರು ಅಲ್ಲೇ ಆ ಹೋರಾಟದಲ್ಲೇ ಗುಂಡು ತಗುಲಿ ಹುತಾತ್ಮರಾದರು. ಉಳಿದವರು ತಲೆಮರೆಸಿಕೊಂಡರು. ಸ್ವಲ್ಪ ಕಾಲದಲ್ಲಿಯೇ, ಲೋಕನಾಥ, ನಿರ್ಮಲ್ ಸೇನ್ ಎಲ್ಲರೂ ಸಿಕ್ಕರೂ. ಸೂರ್ಯಸೇನ್ ಮಾತ್ರ ಚಾಣಾಕ್ಷತೆಯಿಂದ ತಪ್ಪಿಸಿಕೊಂಡೆ ಇದ್ದ.

ಪ್ಲಾನಿನ ಪ್ರಕಾರ ಕಲ್ಪನಾ ಯೂರೋಪಿಯನ್ ಕ್ಲಬ್ ಮೇಲೆ ದಾಳಿ ಮಾಡುವ ಗುಂಪಿನ ಸದಸ್ಯೆಯಾಗಿದ್ದಳು. ಅದಕ್ಕಾಗಿ ಬಾಂಬಿನ ಸಹಕಾರವನ್ನು ನೀಡಿದ್ದಳು. ಬಂದೂಕನ್ನು ಪ್ರಯೋಗಿಸುವುದು ಆಕೆಗೆ ಕರಗತವಾಗಿತ್ತು. ಆದರೆ ದುರದೃಷ್ಟವೆಂಬಂತೆ ದಾಳಿ ನಡೆಯುವ ಒಂದು ವಾರದ ಹಿಂದೆಯೇ ರೈಲು ನಿಲ್ದಾಣದಲ್ಲಿ, ಪೊಲೀಸರು ತಪಾಸಣೆ ನಡೆಸುವಾಗ, ಆಕೆಯ ಬಳಿಯಿದ್ದ ಕ್ರಾಂತಿಯ ಕರಪತ್ರಗಳಿಂದ

ಪುಟ 9 ಕ್ಕೆ ➢

# ಸೋದರತೆಯ ಬಾಂಧವ್ಯ ಬೆಸೆಯುವ ರಕ್ಷಾಬಂಧನ



ಭಾರತದಲ್ಲಿ ಶ್ರಾವಣ ಮಾಸದ ಹುಣ್ಣಿಮೆಯಂದು ರಕ್ಷಾಬಂಧನ ಹಬ್ಬ ಆಚರಣೆಯಲ್ಲಿದೆ. ಇದನ್ನು ರಾಖಿಹಬ್ಬ, ನೂಲು ಹುಣ್ಣಿಮೆ ಎಂದೂ ಕರೆಯುತ್ತಾರೆ. ಇದು ಅಣ್ಣ ತಂಗಿಯರ ಬಾಂಧವ್ಯವನ್ನು ಬೆಸೆಯುವ ಹಬ್ಬವಾಗಿದೆ. ಪ್ರತಿಯೊಬ್ಬ ಸೋದರಿಯೂ ಸಮಾಜದ ದುಷ್ಟ ಶಕ್ತಿಗಳಿಂದ ರಕ್ಷಿಸೆಂದು ಸೋದರನ ಮುಂಗೈಗೆ ರಾಖಿಯನ್ನು ಕಟ್ಟುತ್ತಾಳೆ. ಪ್ರತಿಯೊಬ್ಬ ಸೋದರನು ಈ ಸಮಯದಲ್ಲಿ ಸಹೋದರಿಯೆಡೆಗೆ ತನ್ನ ಭ್ರಾತೃತ್ವ ಪ್ರೇಮವನ್ನು ಉಜ್ವಲಗೊಳಿಸಬೇಕೆಂಬುದು ರಕ್ಷಾಬಂಧನದ ಸಂದೇಶವಾಗಿದೆ.

ರಕ್ಷಾಬಂಧನ ದಿನದಂದು ಸೋದರಿಯರು ತಮ್ಮ ಸೋದರನ ಹಣೆಗೆ ತಿಲಕವನ್ನಿಟ್ಟು, ಆರತಿಬೆಳಗಿ, ಸಿಹಿತಿನ್ನಿಸಿ ಅವನ ಮುಂಗೈಗೆ ರಾಖಿಯನ್ನು ಕಟ್ಟಿ, ಆಶೀರ್ವಾದವನ್ನು ಬೇಡುತ್ತಾಳೆ. ಅವನ ಯಶಸ್ಸು, ಆರೋಗ್ಯ, ಶ್ರೇಯೋಭಿವೃದ್ಧಿಗಾಗಿ ಹಾಗೂ ನೆಮ್ಮದಿ ಕರುಣಿಸೆಂದು ದೇವರಲ್ಲಿ ಪ್ರಾರ್ಥಿಸುತ್ತಾಳೆ.

ಭಾರತೀಯರ ಪವಿತ್ರ ಗ್ರಂಥಗಳಲ್ಲಿ ಒಂದೆನಿಸಿರುವ ಮಹಾಭಾರತದಲ್ಲಿ ಈ ರಕ್ಷಾಬಂಧನದ ಉಲ್ಲೇಖವಿದೆ. ಶ್ರೀ ಕೃಷ್ಣ ಮತ್ತು ದ್ರೌಪದಿಯರ ಸೋದರತೆಯ ಸಂಕೇತ ಈ ರಕ್ಷಾಬಂಧನ ಎಂದು ಹೇಳಲಾಗುತ್ತದೆ.

ಶಿಶುಪಾಲನ ನೂರು ತಪ್ಪುಗಳನ್ನು ಶ್ರೀ ಕೃಷ್ಣನು ಕ್ಷಮಿಸುತ್ತಾನೆ. ಆ ತಪ್ಪುಗಳ ಸರಪಳಿ ಮುಂದುವರೆದಾಗ ಅವನನ್ನು ಶಿಕ್ಷಿಸಲು ಶ್ರೀ ಕೃಷ್ಣನು ತನ್ನ ಸುದರ್ಶನ ಚಕ್ರವನ್ನು ಕಳುಹಿಸುತ್ತಾನೆ. ಶ್ರೀ ಚಕ್ರ ಕೈಯಿಂದ ಹೋಗುವಾಗ ಶ್ರೀ ಕೃಷ್ಣನ ಬೆರಳು ಗಾಯವಾಗಿ ರಕ್ತ ಸುರಿಯುತ್ತದೆ. ಇದನ್ನು ಕಂಡ ದ್ರೌಪದಿಯು ತಾನುಟ್ಟಿದ್ದ ಸೀರೆಯ ಸೆರಗಿನಿಂದ ಸ್ವಲ್ಪ ಬಟ್ಟೆಯನ್ನು ಹರಿದು ಶ್ರೀ ಕೃಷ್ಣನ ಬೆರಳಿಗೆ ಕಟ್ಟುತ್ತಾಳೆ. ಇದನ್ನು ಕಂಡ ಶ್ರೀ ಕೃಷ್ಣನು ದ್ರೌಪದಿಗೆ ಏನುಬೇಕೋ ಕೇಳಿಕೊಳ್ಳಲು ಹೇಳುತ್ತಾನೆ. ಈ ವೇಳೆ ದ್ರೌಪದಿಯು ತನ್ನ ಜೀವನ ಇರುವವರೆಗೆ ಒಳ್ಳೆಯ ಸೋದರಿಯಾಗಿರುತ್ತೇನೆ ಎಂದು ಹೇಳುತ್ತಾಳೆ. ದ್ರೌಪದಿಯ ಈ ಮಾತನ್ನು ಕೇಳಿದ ಶ್ರೀ ಕೃಷ್ಣನು ಸದಾಕಾಲ ದ್ರೌಪದಿಯ ಸೋದರನಾಗಿ ನಿಂತು ಸಂಕಷ್ಟದ ಸಮಯದಲ್ಲಿ ಕಾಪಾಡುವುದಾಗಿ ಹೇಳುತ್ತಾನೆ.

ಅದರಂತೆ ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಶ್ರೀ ಕೃಷ್ಣನು ಅಕ್ಷಯವಾದ ವಸ್ತ್ರವನ್ನು ದಯಪಾಲಿಸಿ ಆಕೆಯ ಮಾನ–ಪ್ರಾಣವನ್ನು ರಕ್ಷಿಸುತ್ತಾನೆ. ಅಂದಿನಿಂದಲೂ ರಕ್ಷಾಬಂಧನ ಭಾರತದಲ್ಲಿ ವಿಶೇಷವಾಗಿ ಆಚರಣೆಗೊಳ್ಳುತ್ತಿದೆ.

ಇತಿಹಾಸದಲ್ಲೂ ರಕ್ಷಾಬಂಧನಕ್ಕೆ ಸಂಬಂಧಿಸಿದ ಹಲವಾರು ಘಟನೆಗಳನ್ನು ಸ್ಮರಿಸಬಹುದು. ರಜಪೂತರು ಯುದ್ಧಕ್ಕೆ ಹೊರಡುವಾಗ ಗಂಡುಮಕ್ಕಳ ಹಣೆಗೆ ತಿಲಕವನ್ನಿಟ್ಟು ರಕ್ಷಣೆಯ ಸಂಕೇತವಾಗಿ ಕೈಗೆ ರೇಷ್ಮೆಯ ದಾರವನ್ನು ಕಟ್ಟಿ, ಜಯಸಾಧಿಸೆಂದು ಹಾರೈಸುತ್ತಿದ್ದರು. ಭಾರತೀಯ ರಾಣಿಯರು ಇತರ ರಾಜ್ಯದ ರಾಜರಿಗೆ ರಾಖಿಯನ್ನು ಕಟ್ಟಿ ಸಹೋದರತೆಯ ಸಂಬಂಧ ಬೆಳೆಸುತ್ತಿದ್ದರು. ಇದರಂತೆ ಆ ರಾಜರು ಸಹೋದರಿಯರ ರಕ್ಷಣೆಗೆ ನಿಲ್ಲುತ್ತಿದ್ದರು.

ಆಕ್ರಮಣಕಾರಿ ಅಲೆಗ್ಸಾಂಡರನ ಪತ್ನಿ ತನ್ನ ಪತಿಯ ರಕ್ಷಣೆಕೋರಿ ರಾಜ ಪೌರವನಿಗೆ ರಾಖಿ ಕಳುಹಿಸುತ್ತಾಳೆ. ಆ ಕ್ಷಣದಿಂದಲೇ ಅಲೆಗ್ಸಾಂಡರನ ಪತ್ನಿಯನ್ನು ಸೋದರಿ ಎಂದು ಸ್ವೀಕರಿಸಿದ. ಪೌರವ ಯುದ್ಧದಲ್ಲಿ ಅಲೆಗ್ಸಾಂಡರನನ್ನು ಸಂಹರಿಸುವ ಸಂದರ್ಭದಲ್ಲಿ ಎತ್ತಿದ ಖಡ್ಗವನ್ನು ಹಾಗೆಯೇ ಇಳಿಸುತ್ತಾನೆ. ಎತ್ತಿದ ಕೈಯಲ್ಲಿ ರಾಖಿಯನ್ನು ಕಂಡ ತಕ್ಷಣ ತನ್ನ ತಂಗಿಯ ನೆನಪಾಗುತ್ತದೆ.

ಭಾರತದಲ್ಲಿ ಕೇವಲ ಅವರ ಅಣ್ಣ–ತಮ್ಮಂದಿರಿಗೆ ಮಾತ್ರ ರಾಖಿಕಟ್ಟದೆ –ಪರಪುರುಷರಿಗೂ ರಾಖಿ ಕಟ್ಟಿ ಸೋದರತೆಯ ಸಂಬಂಧ ಬೆಸೆಯುವ ಪದ್ಧತಿ ಇದೆ.

ರಾಜಸ್ಥಾನದ ಚಿತ್ತೋಡಗಢದಲ್ಲಿ ಜ್ವಾಲಾ ಎಂಬ ಸುಂದರ ತರುಣಿ ಇದ್ದಳು. ಆಕೆ ರಾಖಿ ಹಬ್ಬದ ದಿನ ರಾಖಿ ಮತ್ತು ಸಿಹಿ ಮಿಠಾಯಿ ತೆಗೆದುಕೊಂಡು ಮನೆಯ ಹೊರಗೆ ಬಂದಳು. ಮನೆಯ ಹೊರಗೆ ದಪ್ಪಮೀಸೆ, ಕೆಂಪುಕಣ್ಣು, ದೊಡ್ಡದಾದ ದೇಹ ಹೊಂದಿದ್ದ ದರೋಡೆಕೋರ ಲಾಖಾಸಿಂಗ್ ನಿಂತಿದ್ದ. ಅವನನ್ನು ಕಂಡು ಭಯವಾದರೂ ವಿಚಲಿತಳಾಗದೆ, “ಅಣ್ಣಾ ನಿನ್ನ ತಂಗಿ ರಾಖಿ ಕಟ್ಟುತ್ತಿದ್ದೇನೆ, ನನ್ನ ರಕ್ಷಣೆ ನಿನ್ನದು” ಎಂದು ಹೇಳಿ ರಕ್ಷೆ ಕಟ್ಟಿ ಆತನ ಪಾದದಲ್ಲಿ ತಲೆ ಇಟ್ಟು ನಮಸ್ಕಾರ ಮಾಡಿದಳು. ಅವಳಿಗೆ ತಲೆ ಎತ್ತಲು ಭಯ. ಕೆಲವು ಕ್ಷಣದ ಅನಂತರ ಅವಳ ಕೈ ಮೇಲೆ ಬಿಸಿನೀರಿನ ಹನಿ ಬಿದ್ದಿತು. ಜ್ವಾಲಾ ತಲೆ ಎತ್ತಿ ನೋಡಿದಳು. ಲಾಖಾ ಸಿಂಗನ ಕಣ್ಣಿನಲ್ಲಿ ನೀರು ತುಂಬಿತ್ತು. ಅನಂತರ ಧೈರ್ಯದಿಂದ ‘ಅಣ್ಣ ನೀನು ದರೋಡೆತನ ಬಿಡು’ ಎಂದಳು. ಅಂದಿನಿಂದ ಅವನು ದರೋಡೆ ಮಾಡುವುದನ್ನು ಬಿಟ್ಟು ದೇಶಕ್ಕಾಗಿ ಒಳ್ಳೆಯ ಕೆಲಸ ಮಾಡಿದ. ರಕ್ಷಾಬಂಧನವು ವಿಕಸಿತಗೊಂಡು ಇಂದು ಸಾಮಾಜಿಕ ಸ್ವರೂಪ ಪಡೆಯುತ್ತಿದೆ.

ಈ ರಕ್ಷಾಬಂಧನ ನಾಡಿನ ಸಾಂಸ್ಕೃತಿಕತೆಯ ಪ್ರತೀಕ. •

➢ ಪುಟ 3 ರಿಂದ..... ನಾಗಪಂಚಮಿ...

ನಿಜವಾದ ಅರ್ಥ ಪಡೆಯುವುದು ಪ್ರಾಕೃತಿಕವಾಗಿ ಮನುಷ್ಯ ಸ್ವಾರ್ಥರಹಿತ ಬದುಕನ್ನು ಜೀವಿಸಿದಾಗಲೇ!

ನಮ್ಮ ಸಂಸ್ಕೃತಿಯ ಆವಿಷ್ಕಾರ ಮತ್ತು ಪುನಶ್ಚೇತನದ ಶಕ್ತಿಯಿರುವುದು ನಮ್ಮ ಅರಣ್ಯಗಲ್ಲಿ ಮತ್ತು ನಮ್ಮ ತಪೋವವನಗಳಲ್ಲಿ.

ದಿನನಿತ್ಯ ನಮಗಾಗುವ ಕಾರುಣ್ಯಭಾವವನ್ನು ಮರೆಸುವ ಅತಿಯಾದ ಆಸೆ, ಸ್ಪರ್ಧೆ ಮತ್ತು ಸಂಘರ್ಷಗಳ ತುಮುಲಗಳನ್ನು ಹೋಗಲಾಡಿಸಿ ನಿರಂತರ ಶಾಂತಿಯನ್ನು ಪ್ರಕೃತಿ ತರಬಲ್ಲ ಶಕ್ತಿಗಿರುವುದು ಪ್ರಕೃತಿಗೆ ಮಾತ್ರ!

ಭಾರತದ ಪ್ರಾಚೀನ ಸಂಸ್ಕೃತಿಯ ಹಿರಿಮೆಯೆಂದರೆ ಮನುಕುಲದ ಆವಿಷ್ಕಾರಕ್ಕೆ ಮೂಲ ನಮ್ಮ ವೃಕ್ಷಸಂಪತ್ತು ಮತ್ತು ಜಲಸಂಪತ್ತು.

ನಮ್ಮ ಅರಣ್ಯಗಳಿಂದ ಪ್ರಕೃತಿಯಿಂದ ನಾವು ಕಲಿಯ ಬೇಕಾದದ್ದು ಪ್ರತಿಯೊಂದು ಜೀವಿಗೂ ಬದುಕುವ ಹಕ್ಕು ಇರುವುದರಿಂದ ಮತ್ತೊಂದು ಜೀವಿಯ ಬದುಕುವ ಹಕ್ಕನ್ನು ಕಸಿದುಕೊಳ್ಳಬಾರದು. ಯಾವುದೇ ಘರ್ಷಣೆಗಳಿಲ್ಲದೆ ಹೇಗೆ ಶಾಂತಿ ಮತ್ತು ನೆಮ್ಮದಿಯಿಂದ ಬದುಕಿ ಸಹಬಾಳ್ವೆಯೊಂದಿಗೆ ಪರಿಪೂರ್ಣತೆಯತ್ತ ಸಾಗಬಹುದು.

ವಿಲಾಸೀ ಭೋಗ ಜೀವನದತ್ತ ಸಾಗುವ ಮನುಷ್ಯ ಆಧುನಿಕತೆಯ ಸೋಗಿನಲ್ಲಿ ಪ್ರಕೃತಿಯಿಂದ ದೂರವಾದ ಮನುಷ್ಯ ಕಾಡುಗಳನ್ನು ರಕ್ಷಿಸದೇ ಕಾಡ ಕಡಿದು ನಾಡ ಕಟ್ಟಿದನು.

ತಮ್ಮ ನೆಲೆಯನ್ನು ಕಳೆದುಕೊಂಡ ಪ್ರಾಣಿಗಳು, ಸರ್ಪಗಳು ಮತ್ತು ಅನೇಕ ಪ್ರಭೇದಗಳು ಕಾಣೆಯಾಗುತ್ತಾ ಹೋದವು.

ಇದೇ ಕಾರಣದಿಂದ ನಮ್ಮ ನೆಲ, ಜಲ ಮತ್ತು ವಾತಾವರಣದ ಸಂರಕ್ಷಣೆಯ ದೃಷ್ಟಿಯಿಂದ ನಾವು ಹಬ್ಬಗಳ ಪರಂಪರೆಯನ್ನು ಕೈಬಿಡದೇ ಆಚರಿಸಿದಲ್ಲಿ ನಮ್ಮ ಬದುಕು ಸಾರ್ಥಕವಲ್ಲವೇ?

●

➢ ಪುಟ 5 ರಿಂದ..... ಶ್ರೀ ವರಲಕ್ಷ್ಮೀ...

ಮಹತ್ತ್ವದ ಹಬ್ಬಗಳಲ್ಲಿ ಒಂದು. ವಿವಾಹಿತ ಹೆಣ್ಣುಮಕ್ಕಳು ಕುಟುಂಬದವರೆಲ್ಲರ ಒಳಿತಿಗಾಗಿ ಈ ಹಬ್ಬವನ್ನು ಆಚರಿಸುತ್ತಾರೆ. ಆಂಧ್ರ, ತಮಿಳುನಾಡಿನಲ್ಲಿಯೂ ಈ ಹಬ್ಬದ ಆಚರಣೆಯಿದೆ. ಹೀಗೆ ಈ ದಿನ ವರಲಕ್ಷ್ಮೀಯ ವ್ರತವನ್ನು ಮಾಡಿ ಪ್ರಾರ್ಥಿಸುವುದರಿಂದ ಎಂಟು ಬಗೆಯ ಶಕ್ತಿಸ್ವರೂಪಿಣಿ ಮಹಾಲಕ್ಷ್ಮೀಯನ್ನು ಪೂಜಿಸಿದಂತಾಗುತ್ತದೆ ಎಂದು ಹೇಳಲಾಗಿದೆ. ಅಷ್ಟಲಕ್ಷ್ಮೀಪತಿಯಾದ ಮಹಾವಿಷ್ಣುವು ಈ ಎಂಟು ಶಕ್ತಿಗಳಿಗೆ ಆಶ್ರಯ ಸ್ಥಾನವಾಗಿರುತ್ತಾನೆ. ಈ ಶಕ್ತಿಗಳನ್ನೇ ಮಹಾಲಕ್ಷ್ಮಿಯ ನಾನಾ ರೂಪಗಳಲ್ಲಿ ಭಾವಿಸಲಾಗುತ್ತದೆ. ಮಹಾವಿಷ್ಣುವು ಈ ಬ್ರಹ್ಮಾಂಡವನ್ನು ಹೊರೆಯುವ ಕಾರ್ಯದಲ್ಲಿ ಈ ಎಂಟು ಶಕ್ತಿಗಳನ್ನು ತನ್ನಿಂದ ಹೊರ ಚೆಲ್ಲುತ್ತಾನೆಂದೂ, ಅವುಗಳನ್ನೇ ಮಾನವನು ಶ್ರೀ ಲಕ್ಷ್ಮಿಯ ರೂಪದಲ್ಲಿ ಆರಾಧಿಸುತ್ತಾನೆಂದೂ ಹೇಳುತ್ತಾರೆ. ಆರೋಗ್ಯ, ಐಶ್ವರ್ಯ ಮತ್ತು ಅಭಿವೃದ್ಧಿ ಎಂಬ ಮೂರು ಅಂಗಗಳು ಈ ಶಕ್ತಿಗಳ ಕಾರ್ಯವನ್ನು ಅವಲಂಬಿಸಿರುವುದರಿಂದ ಲಕ್ಷ್ಮೀದೇವಿಯನ್ನು ಪೂಜಿಸುವುದರಿಂದ ಈ ಶಕ್ತಿಗಳನ್ನು ಪಡೆಯಲು ಸಾಧ್ಯವೆಂದೂ ಭಾವಿಸಲಾಗಿದೆ.

**ನಮಸ್ತೇಸ್ತು ಮಹಾಮಾಯೇ ಶ್ರೀಪೀಠೇ ಸುರಪೂಜಿತೇ**
**ಶಂಖ ಚಕ್ರ ಗದಾಹಸ್ತೇ ಮಹಾಲಕ್ಷ್ಮೀ ನಮೋಸ್ತುತೇ॥**
**ಸಿದ್ಧಿ ಬುದ್ಧಿ ಪ್ರದೇ ದೇವೀ ಸರ್ವದುಷ್ಟ ಭಯಂಕರೀ**
**ಮಂತ್ರಮೂರ್ತೇ ಸದಾದೇವೀ ಮಹಾಲಕ್ಷ್ಮೀ ನಮೋಸ್ತುತೇ॥**

➢ ಪುಟ 7 ರಿಂದ..... ಕ್ರಾಂತಿಯ ಕಹಳೆ...

ಆಕೆ ಬಂಧನಕ್ಕೊಳಗಾಗಿ ಬಿಟ್ಟಳು. ಆಕೆಯ ತಂದೆ ದೊಡ್ಡ ಶ್ರೀಮಂತ ಹಾಗು ಪ್ರಭಾವಿ ವ್ಯಕ್ತಿಯಾಗಿದ್ದರಿಂದ, ಜಾಮೀನಿನ ಮೇಲೆ ಬಿಡುಗಡೆಯಾದಳು. ಆ ನಂತರ ಭೂಗತೆಯಾಗಿ, ಸೂರ್ಯಸೇನನೊಂದಿಗೆ ನಿರಂತರ ಅಲೆದಾಡುತ್ತಿದ್ದಳು. ಫೆಬ್ರವರಿ 17, 1933 – ಹಾಗೊಂದು ಮನೆಯಲ್ಲಿ ತಲೆಮರೆಸಿಕೊಂಡಿದ್ದಾಗ, ಬ್ರಿಟಿಷರು ಆಕ್ರಮಿಸಿದರು. ಇಬ್ಬರ ನಡುವೆ ಸ್ವಲ್ಪ ಕಾದಾಟ ನಡೆದರೂ, ಸೂರ್ಯಸೇನನ ಬಳಿ ಅಷ್ಟೊಂದು ಮದ್ದುಗಳಿರಲಿಲ್ಲ. ಅಲ್ಲದೆ ಜೊತೆಗಿದ್ದ ಕೆಲವು ಹುಡುಗರಿಗೆ ಗುಂಡುಗಳು ತಗುಲಿದ್ದವು. ಅವರನ್ನು ಕಲ್ಪನಾಳ ಜೊತೆಗೆ ಕಳುಹಿಸಿ, ತಾನು ಬೇರೆ ದಿಕ್ಕಿನಲ್ಲಿ ಓಡಿದ. ಆದರೆ, ಸುತ್ತಲಿದ್ದ ಪೊಲೀಸರು ಅವನನ್ನು ಹಿಡಿದೇ ಬಿಟ್ಟರು. ಕಲ್ಪನಾ ಮತ್ತೆ ಭೂಗತಳಾದಳು.ಇತ್ತ, ವಿಚಾರಣೆ ನಡೆದು, ಸೂರ್ಯಸೇನ ಹಾಗು ತಾರಕೆಶ್ವರನಿಗೆ ಗಲ್ಲು ಶಿಕ್ಷೆ ವಿಧಿಸಲಾಯಿತು. ಅತಿ ಕ್ರೂರವಾಗಿ ಸೂರ್ಯಸೇನನನ್ನು ಹಿಂಸಿಸಿ, ನೇಣಿಗೇರಿಸಲಾಯಿತು. ಇದರ ನಡುವೆಯೇ, ತಪ್ಪಿಸಿಕೊಂಡಿದ್ದ ಕಲ್ಪನಾಳೂ ಸೆರೆಸಿಕ್ಕಿದ್ದಳು. ಕ್ರಾಂತಿಕಾರಿಗಳಿಗೆ ಸಹಾಯ ಮಾಡಿ, ಆಂಗ್ಲಪ್ರಭುತ್ವದ ವಿರುದ್ಧ ದಂಗೆದ್ದ ಕಾರಣಕ್ಕೆ ಆಕೆಗೆ ಕಠಿಣ ಸಜೆಯನ್ನು ವಿಧಿಸಲಾಯಿತು. 1939 ರಲ್ಲಿ ಬಿಡುಗಡೆಯಾದ ಕಲ್ಪನಾ, ತನ್ನ ಓದನ್ನು ಪೂರ್ಣಗೊಳಿಸಿ, ಭಾರತೀಯ ಕಮ್ಯುನಿಸ್ಟ್ ಪಾರ್ಟಿಯನ್ನು ಸೇರಿದಳು. 1943 ರಲ್ಲಿ ಪೂರ್ಣಚಂದ್ ಜೋಷಿಯನ್ನು ವಿವಾಹವಾದ ಕಲ್ಪನಾ ಇಬ್ಬರು ಮಕ್ಕಳಿಗೆ ಜನ್ಮ ನೀಡಿದಳು. 1995 ಫೆಬ್ರವರಿ 8 ರಂದು, ಕಲ್ಕತ್ತಾದಲ್ಲಿ ಕಲ್ಪನಾ ಕೊನೆಉಸಿರೆಳೆದಳು.

ಜುಲೈ 27 – ಕಲ್ಪನಾಳ ಜನ್ಮದಿನ. ಯಾವ ಚಿತ್ತಗಾಂಗ್ ನ ಕ್ರಾಂತಿಯು ಭಾರತದ ಇತಿಹಾಸದಲ್ಲಿ ಅಚ್ಚಳಿಯದೆ ನಿಂತಿತೋ, ಆ ಬೃಹತ್ ಹೋರಾಟದ ಮುಖ್ಯ ಭಾಗವಾಗಿದ್ದವಳು ಈ ಕಲ್ಪನಾ. ಮನೆಯಲ್ಲಿ ಅಪಾರ ಶ್ರೀಮಂತಿಕೆಯಿದ್ದರೂ, ರಾಷ್ಟ್ರಕ್ಕಾಗಿ ತನ್ನದೂ ಒಂದು ಸೇವೆ ಸಲ್ಲಬೇಕೆಂಬ ಆಕಾಂಕ್ಷೆಯಿಂದ ಕ್ರಾಂತಿಯನ್ನು ಸೇರಿದ್ದವಳು. ಕೇವಲ 20 ನೇ ವಯಸ್ಸಿನಲ್ಲೇ ಕ್ರಾಂತಿಗೆ ಧುಮುಕಿ, ಹತ್ತಾರು ಆಂಗ್ಲ ಸಿಪಾಯಿಗಳನ್ನು, ಬಂದೂಕಿನಿಂದ ಹೊಡೆದುರುಳಿಸಿದ ಧೀರಸ್ತ್ರೀ. ಭಾರತಿಯ ಮಕ್ಕಳಾರೂ ಅಬಲೆಯರಲ್ಲ ಎಂದು ಸಾರಿ ಹೇಳುವಂತೆ ಆಕೆ ಬದುಕಿದಳು. ಆ ಧೀಮಂತಹೆಣ್ಣಿನ ರಾಷ್ಟಭಕ್ತಿ ನಮ್ಮ ಪ್ರೇರಕ ಶಕ್ತಿಯಾಗಲಿ. ವಂದೇ ಮಾತರಂ..!!

●

# ರಾಷ್ಟ್ರೀಯ ಶಿಕ್ಷಣ ನೀತಿಯ ಕಾರ್ಯಕ್ರಮ ವರದಿ ಮಾಧ್ಯಮಗಳಲ್ಲಿ

## 9ರಿಂದ 12ನೇ ಕ್ಲಾಸ್‌ವರೆಗೆ ಸೆಮಿಸ್ಟರ್ ಪದ್ಧತಿ ಸಲ್ಲ

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಸೆಮಿಸ್ಟರ್ ಪದ್ಧತಿ ಅವೈಜ್ಞಾನಿಕ ■ ಸಂವಾದ ಕಾರ್ಯಕ್ರಮದಲ್ಲಿ ಶಿವಾನಂದ ಸಿಂಧನಕೇರಾ



## ಕೆಆರ್‌ಎಂಎಸ್‌ನ ವಿವಿಧ ಬೇಡಿಕೆಗಳಿಗಾಗಿ ಡಿಸಿಗೆ ಮನವಿ



## ಅಂಕಗಳಿಗಿಂತ ಕೌಶಲಕ್ಕೆ ಹೆಚ್ಚು ಆದ್ಯತೆ




## ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ವಿಸ್ತೃತ ಚರ್ಚೆ

ಕಾರ್ಯಕ್ರಮದಲ್ಲಿ ಶಿಕ್ಷಣದ ಅನೇಕ ಅಂಶಗಳ ಸಾಧಕ–ಬಾಧಕಗಳಿಗೆ ಸಲಹೆ | ಆತಂಕ, ಅಭಿಪ್ರಾಯಗಳು ವ್ಯಕ್ತ



## Education system needs to be strengthened: VC



## ಅನುದಾನ ಕೊರತೆ: ರಾಜ್ಯ ವಿವಿಗಳು ತಬ್ಬಲಿ

ಸ್ವಾಯತ್ತೆ ನೀಡಿ, ಎಲ್ಲೆಡೆ ಸ್ನಾತಕೋತ್ತರ ಕೇಂದ್ರ ತೆರೆಯಲು ಅವಕಾಶ ಕೊಡಿ: ಮೈವಿವಿ ಕುಲಪತಿ ಒತ್ತಾಯ



# ಬೇಡಿಕೆ ಈಡೇರಿಕೆಗೆ ಮಾಧ್ಯಮಿಕ ಶಿಕ್ಷಕರ ಆಗ್ರಹ



MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026
Date of Publishing : 17-07-2019 Date of Posting 20h or 21st of every month Posted at Periodical Rate

# ರಾಷ್ಟ್ರೀಯ ಶಿಕ್ಷಣ ನೀತಿ : ಚಿಂತನ-ಮಂಥನ



ನಮ್ಮ ರಾಷ್ಟ್ರದ ಶಿಕ್ಷಣ ನೀತಿ ಹೇಗಿರಬೇಕೋ ಅದೇ ಕಲ್ಪನೆಯಲ್ಲಿಯೇ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಕರಡುಪ್ರತಿ ತಯಾರಾಗಿದೆಯೆಂದು ರಾಷ್ಟ್ರೀಯ ಶಿಕ್ಷಣ ನೀತಿ ಸಮಿತಿ ಸದಸ್ಯರಾದ ಪ್ರೋ॥ ಎಂ.ಕೆ ಶ್ರೀಧರ್‌ರವರು ದಿನಾಂಕ 20.06.2019 ರಂದು ಶಾಸಕರಭವನ, ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಏರ್ಪಡಿಸಿದ್ದ "ರಾಷ್ಟ್ರೀಯ ಶಿಕ್ಷಣ ನೀತಿ-2049(ಕರಡು), ಚಿಂತನ-ಮಂಥನದಲ್ಲಿ ಹೇಳಿದರು.

ಹೊಸ ಶಿಕ್ಷಣ ನೀತಿಯ ಅನೇಕ ಬಿಂದುಗಳ ಮೇಲೆ ಶಿಕ್ಷಣ ತಜ್ಞರು, ಶಾಸಕರು, ವಿಧಾನಪರಿಷತ್ತಿನ ಸದಸ್ಯರು, ವಿದ್ವಾಂಸರು, ಶಿಕ್ಷಕರು ಸವಿಸ್ತಾರವಾಗಿ ಚರ್ಚಿಸಿದರು. ಮೂರು ವರ್ಷದಿಂದ ಪ್ರಾರಂಭವಾಗುವ ಶಿಕ್ಷಣದಿಂದ ಹಿಡಿದು ಉಚ್ಚ ಶಿಕ್ಷಣದವರೆಗೆ ಯಾವ-ಯಾವ ಕೋರ್ಸ್‌ಗಳು ಇರಬೇಕು, ಪಠ್ಯಕ್ರಮ ಹೇಗಿರಬೇಕು? ಶಿಕ್ಷಕರ ನೇಮಕ ಪ್ರಕ್ರಿಯೆ ಹೇಗಿರಬೇಕು? ಎಂಬ ವಿಷಯಗಳ ಬಗ್ಗೆ ಪ್ರೋ॥ ಎಂ.ಕೆ.ಶ್ರೀಧರ್‌ರವರು ತಿಳಿಸಿದರು. ಎಲ್ಲರೂ ಚರ್ಚೆಯಲ್ಲಿ ಉತ್ಸಾಹಿತರಾಗಿ ಭಾಗವಹಿಸಿದರು.

ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಮಹಾಮಂತ್ರಿಗಳಾದ ಶ್ರೀ ಶಿವಾನಂದ ಸಿಂಧನಕೇರಾರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮಾಜಿ ಶಿಕ್ಷಣ ಸಚಿವರಾದ ತನ್ವೀರ್ ಸೇಠ್‌ರವರು, ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಅರುಣ್ ಶಹಾಪುರ್, ಶ್ರೀಮತಿ ತಾರಾ, ಶ್ರೀ ಪುಟ್ಟಣ್ಣ ಇನ್ನಿತರ ಪ್ರಮುಖರು ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ರವರು ಕಾರ್ಯಕ್ರಮದ ನಿರೂಪಣೆಯನ್ನು ಮಾಡಿದರು. ಸಹ ಕಾರ್ಯದರ್ಶಿಗಳಾದ ಶ್ರೀಯುತ ಗಂಗಾಧರ್ ರವರು ಎಲ್ಲರನ್ನೂ ಸ್ವಾಗತಿಸಿದರು. ಮತ್ತು ಅ.ಭಾ.ರಾ.ಶೈ. ಮಹಾಸಂಘದ ಮಹಿಳಾವಿಭಾಗದ ಸಹ ಕಾರ್ಯದರ್ಶಿಗಳಾದ ಶ್ರೀ ಮಮತಾ ಡಿ.ಕೆ ರವರು ಸಭೆಯಲ್ಲಿ ಭಾಗವಹಿಸಿದ ಎಲ್ಲರಿಗೂ ವಂದಿಸಿದರು.



ದಿನಾಂಕ 16-7-2019 ರ ಗುರು ಪೂರ್ಣಿಮೆಯ ಪ್ರಯುಕ್ತ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಕಾರ್ಯಕರ್ತರು ಅನೇಕ ಜಿಲ್ಲೆಗಳಲ್ಲಿ ನಡೆಸಿದ ಗುರುವಂದನಾ ಕಾರ್ಯಕ್ರಮ

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com